2. ನಿಯಮ 69ರ ಮೇರೆಗೆ ಚರ್ಚೆ.

ಅಧ್ಯಕ್ಷರು: ಈಗ ನಾನು 69ರ ಕೆಳಗಡೆ ಇದನ್ನು ಕನ್‌ವರ್ಟ್ ಮಾಡಿದ್ದೇನೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೇ, ಈಗ ನಮ್ಮ ನಿಲುವಳಿ ಸೂಚನೆ ಬಗ್ಗೆ ಏನಾದರೂ ತೀರ್ಮ ಕೊಡಿ.

ಅಧ್ಯಕ್ಷರು: ಕೊಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೇ, ಈಗ ತಾವು ಈಗಾಗಲೇ ನಿರ್ಣಯವನ್ನು ಕೊಟ್ಟು ನಿಯಮ 69ರ ಕೆಳಗೆ ಚರ್ಚೆಗೆ ತೆಗೆದುಕೊಳ್ಳಬೇಕೆಂದು ತಾವು ನಿರ್ಣಯವನ್ನು ಕೊಟ್ಟಿದ್ದೀರಿ. ಆ ನಿರ್ಣಯದ ಬಗ್ಗೆ ನಮ್ಮ ಯಾವುದೇ ಆಕ್ಷೇಪಣೆಗಳು ಇಲ್ಲವೆಂದು ಹೇಳಿ ಸದನದ ನಾಯಕರೂ ಕೂಡ ಹೇಳಿದ್ದಾರೆ. ಇಲ್ಲಿ ಪ್ರಶ್ನೆ ಬರತಕ್ಕದ್ದು ಇಷ್ಟೆ. ಈಗ ಏನು ಸದನದಲ್ಲಿ ಅವರು ಹೇಳಿದರು, ಸೆಕ್ಷನ್ 202, 203ರ ಕೆಳಗೆ ಹೇಳುತ್ತಿದ್ದರು. This is also controlled under Section 176 of the IPC and also Sections 36 and 40 of the Cr. P.C. ಯಾರೂ legally bound ಎನ್ನತಕ್ಕದ್ದೂ ಕೂಡ riding procedures ಇದ್ದಾವೆ, ಆದ್ದರಿಂದ ಇಲ್ಲಿ ಒಂದು ಅವರು ಮಾನ್ಯ ಮುಖ್ಯ ಮಂತ್ರಿಗಳು ಹೇಳಿರತಕ್ಕದ್ದು ಒಬ್ಬ ಮಾಜಿ ಸಚಿವ ಹಾಗೂ ಒಬ್ಬ ಪತ್ರಕರ್ತ ಈ ತರಹದ ಆಮಿಷವನ್ನು ಒಡ್ಡುವುದಕ್ಕೆ ಬಂದಿದ್ದರು ಎನ್ನುವ ವಿಷಯವನ್ನು ಹೇಳಿದ್ದಾರೆ. ಅದು substantiative ಆಗುವುದಿಲ್ಲ. The Section has also no application where the principal offence has not been committed. ಈ ಪ್ರಿನ್ಸಿಪಲ್ ಅಫೆನ್ಸ್ ಕಮಿಟ್ ಆಗುವ ಸಂದರ್ಭಗಳು ಯಾವುದು ಇರುತ್ತದೆ, he is legally bound to disclose that offence. ಎಫ್‌ಐಆರ್ ಕ್ರಿಯೇಟ್ ಆಗಿರುತ್ತದೆ. ಅಥವಾ ಇನ್ನೊಂದು ಏನೋ ವಿಷಯ ಇರುತ್ತದೆ. He is legally bound to tender his evidence also before the Court. If he willfully holds it back, then it automatically reconstitues an offence. ಇತ್ತೀಚಿನ ದಿನಮಾನಗಳಲ್ಲಿ ಹೊಸ ಹೊಸ ಹೆಸರುಗಳನ್ನು ನಾವು ಮಾಡುತ್ತಿದ್ದೇವೆ, ಈ ತರಹದ ಬ್ರೋಕರ್ ಗಳನ್ನು power broakerಗಳನ್ನು ನಾವು logists ಎಂದು ಕರೆಯುತ್ತೇವೆ. ಅಮೇರಿಕಾದಲ್ಲಂತೂ logists ಗಳಿಗೆ ಮಾನ್ಯತೆಯೇ ಇದೆ. One can take that as legitimate....ಇನ್ನೊಂದು ಬಹಳ ಮುಖ್ಯವಾಗಿರತಕ್ಕಂಥದ್ದು, ಸನ್ಮಾನ್ಯ ಅಧ್ಯಕ್ಷರೇ, ತಾವು ಇದನ್ನು 69ರ ಕೆಳಗೆ...

SRI K.R. RAMESH KUMAR: You are making his position worst. ಐಪಿಸಿ 176 ಏನು ಹೇಳುತ್ತೆ ಹೇಳಿ. ಸೆಕ್ಷನ್ 202, ಈ ಎರಡನ್ನೂ ಓದಿ.

SRI M.P. PRAKASH: See, Section 36 and 40 are also governed under Cr. P.C. ಅದು ಕೂಡ ಇದರಲ್ಲಿ ಇದೆ. ಜೊತೆಗೆ ಇರತಕ್ಕ riding principles ಏನು ಇದ್ದಾವೆ, ಕೇಸ್ ಲಾ ಏನಿದೆ ಎಂದು ಗೊತ್ತಿದೆ. Each case law differs from the other. ಅದೇನಾದರೂ ಇದ್ದುಕೊಳ್ಳಲಿ.

SRI K.R. RAMESH KUMAR: Is he not a public servant?

SRI M.P. PRAKASH: He is a public servant under Section 21.

SRI K.R. RAMESH KUMAR: Is he not legally bound?

SRI M.P. PRAKASH: Even a President of a Co-operative Society is a public servant under Section 21 of the IPC.

SRI K.R. RAMESH KUMAR: Is he not legally bound to take further legal proceedings.

SRI M.P. PRAKASH: Where such a cognizable offence is committed.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್: ಅದೂ ಇದೆ.

ಶ್ರೀ ಎಂ.ಪಿ. ವೆಂಕಟೇಶ್: ಸ್ವಲ್ಪ ತಾಳ್ಮೆಯಿಂದ ಇರಿ ಸ್ವಾಮಿ. ಅವರೇನು ಹೇಳುತ್ತಾರೋ ಸ್ವಲ್ಪ ಕೇಳಿ.

SRI K.R. RAMESH KUMAR: Mr. Prakash, we have been associates for a very long time. It is my earnest appeal to you. Please don't leave your prints in the records of this House and champion the cause like this. Please for heaven's sake don't do this.

SRI M.P. PRAKASH: Please for Heaven sake, don't try to say a particular portion of it and separate the other portion of it.

SRI K.R RAMESH KUMAR: All right, it is for the posterity to take a look at both of us.

ಶ್ರೀ ಎಂ.ಪಿ. ಪ್ರಕಾಶ್: ತಾವು ಹಿರಿಯರು.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಆಲ್‌ರೈಟ್.

ಶ್ರೀ ಎಂ.ಪಿ. ಪ್ರಕಾಶ್: ಈಗ ಇರತಕ್ಕ ಸನ್ನಿವೇಶದಲ್ಲಿ ಅದರ ಅಕಾಡೆಮಿಕ್ ಡಿಸ್ಕಷನ್ ಈಗ ಅಗತ್ಯವಿಲ್ಲ. ಏಕೆಂದರೆ ಈಗಾಗಲೇ ತಾವು 69 ರ ಕೆಳಗೆ ಪರಿವರ್ತನೆಗೊಳಿಸಿದ್ದೀರಿ. ಆದರೆ ಇಲ್ಲಿ ಬರುವ ಪ್ರಶ್ನೆ ಇಷ್ಟೆ. ಅವರು ಹೇಳಿದ್ದಾರೆ. ಈಗಾಗಲೇ ಅವರು ಅನೌನ್ಸ್ ಮಾಡಿದ್ದಾರೆ. ಅವರು ತೀರ್ಪನ್ನು ಕೊಟ್ಟಿದ್ದಾರೆ. ಈಗ ಶ್ರೀರಾಮರೆಡ್ಡಿಯವರು ಬಿಎಂಐಸಿ ವಿಚಾರದಲ್ಲಿ ಚರ್ಚೆಯಾಗಬೇಕು ಎಂದು ಹೇಳಿ ಒಂದು ಅಡ್ಜರ್ನ್‌ಮೆಂಟ್ ಮೋಷನನ್ನು ಕೊಟ್ಟಿದ್ದಾರೆ. ಇಲ್ಲಿ ತಾವು 69ಕ್ಕೆ ಪರಿವರ್ತನೆ ಮಾಡಿದ ಸಂದರ್ಭದಲ್ಲಿ ಕೇವಲ ಈ ವಿಚಾರಕ್ಕೆ ಮಾತ್ರ ಸೀಮಿತ ಇರುತ್ತದೆ. ಬಿಎಂಐಸಿ ವಿಚಾರದಲ್ಲಿ ಚರ್ಚೆಯಾಗಬೇಕಾಗಿದ್ದರೆ ಅಡ್ಜರ್ನ್‌ಮೆಂಟ್ ಮೋಷನನ್ನು ಮಾನ್ಯ ಶ್ರೀರಾಮರೆಡ್ಡಿಯವರು ಕೊಟ್ಟಿದ್ದಾರೆ. ಒಂದೇ ದಿವಸದಲ್ಲಿ ಎರಡು ಅಡ್ಜರ್ನ್‌ಮೆಂಟ್ ಮೋಷನನ್ನು ತೆಗೆದುಕೊಳ್ಳುವುದ್ಕೆ ಬರುವುದಿಲ್ಲ. ಅದನ್ನು

ಒಪ್ಪಿಕೊಳ್ಳುತ್ತೇವೆ. ಈಗ ಒಂದನೇ ಅಡ್ಜರ್ನ್‌ಮೆಂಟ್ ಮೋಷನ್ ಎನ್ನತಕ್ಕದ್ದು ಈಗ ಇಲ್ಲ. ಏಕೆಂದರೆ ಮಾನ್ಯ ವಿರೋಧ ಪಕ್ಷದ ನಾಯಕರು ಕೊಟ್ಟಿರತಕ್ಕ ನಿಲುವಳಿ ಸೂಚನೆಯನ್ನು ತಾವು ಬೇರೆ ಸೆಕ್ಷನ್ ಕೆಳಗೆ ಪರಿವರ್ತನೆಗೊಳಿಸಿ ವಿಚಾರವನ್ನು ಚರ್ಚೆಗೆ ಬಿಟ್ಟಿದ್ದೀರಿ. ಆದರೆ ಈಗ ತಾವು ತೆಗೆದುಕೊಳ್ಳಬೇಕಾದಂಥದ್ದು, ಎರಡನೇ ನಿಲುವಳಿ ಸೂಚನೆ, ಮಾನ್ಯ ಶ್ರೀರಾಮರೆಡ್ಡಿಯವರು ಕೊಟ್ಟಿರತಕ್ಕದ್ದು. ಈ ನಿಲುವಳಿ ಸೂಚನೆಯನ್ನು ತಾವು ಅವರಿಗೆ ಅವಕಾಶವನ್ನು ಕಲ್ಪಿಸಿಕೊಡಿ. ಬಿಎಂಐಸಿ ವಿಚಾರದಲ್ಲಿ ನಾವು ಚರ್ಚೆ ಮಾಡುವುದಕ್ಕೆ ತಯಾರಿದ್ದೇವೆ. ಅವರೂ ಕೂಡ ತಯಾರಿದ್ದಾರೆ. ಅದು ಎರಡು ದಿವಸ, ಮೂರು ದಿವಸ, ವಾರಗಟ್ಟಲೆ ಯಾದರೂ ನಾವು ತಯಾರಿದ್ದೇವೆ. ತಾವು ನಿಗದಿ ಮಾಡುವ ಸಮಯಕ್ಕೆ ಅನುಗುಣವಾದ ರೀತಿಯಲ್ಲಿ ಚರ್ಚೆಯಾಗಲಿ. ಈಗ ಇಲ್ಲಿರುವುದು ಕೇವಲ ಸೀಮಿತವಾದ ಉದ್ದೇಶಕ್ಕೆ ಇಟ್ಟು, ಸೀಮಿತವಾದ ಉದ್ದೇಶವೂ ಆಗಿದೆ, ಇಡೀ ಬಿಎಂಐಸಿ ವಿಚಾರವೂ ಆಗಿದೆ. ಚರ್ಚೆ ಆಗಲಿಕ್ಕೆ ತಾವು ದಯವಿಟ್ಟು ಶ್ರೀರಾಮರೆಡ್ಡಿಯವರ ಮೋಷನನ್ನು ತೆಗೆದುಕೊಂಡು ಅದನ್ನು ತಾವು ಒಪ್ಪಿಕೊಳ್ಳುತ್ತೀರೋ ಅಥವಾ ತಿರಸ್ಕರಿಸುತ್ತೀರೋ ಅದನ್ನೂ ಕೂಡ ತಾವು ಬೇರೆಯಾಗಿ ಪರಿವರ್ತನೆಗೊಳಿಸುತ್ತೀರೋ ಎನ್ನುವುದನ್ನು ತಾವು ಈ ಸದನಕ್ಕೆ ಆದೇಶ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಅವರು ಮೋಷನನ್ನು ಮೂವ್ ಮಾಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ನಾವು ಅಡ್ಜರ್ನ್‌ಮೆಂಟ್ ಮೋಷನ್ ಕೇಳಿದ್ದೇವೆ. ಅದಕ್ಕೆ ಸೀಮಿತವಾದ ಬಿಎಂಐಸಿ ಪ್ರಾಜೆಕ್ಟ್ ಬಗ್ಗೆ ಅದರ ಸಾಧಕಬಾಧಕವಾಗಲಿ, ಮೆರಿಟ್ ಆಗಲಿ, ಡೀ–ಮೆರಿಟ್ ಆಗಲಿ ಅದರ ಚರ್ಚೆ ಬಗ್ಗೆ ನಾವು ಹೋಗುತ್ತಿಲ್ಲ. ಅಥವಾ ಪ್ರಸ್ತಾಪಕ್ಕೂ ಕೂಡ ನಮ್ಮ ನಿಲುವಳಿ ಸೂಚನೆಯಲ್ಲಿ ಮಾಡಿಲ್ಲ. ನಾವು ಲಿಮಿಟೆಡ್ ಏನೆಂದರೆ, ಮಾನ್ಯ ಮುಖ್ಯಮಂತ್ರಿಗಳು 13ನೇ ತಾರೀಖು ಏನು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದಕ್ಕೆ ಸೀಮಿತವಾಗಿ ಚರ್ಚೆಗೆ ತೆಗೆದುಕೊಳ್ಳಬೇಕು ಅಂತ. ಏಕೆಂದರೆ, ಇದೊಂದು criminal offence ಇದೆ. IPC ಪ್ರಕಾರ ಇದೊಂದು offence ಆಗಿರುವ ಕಾರಣ ಇದನ್ನು ಪ್ರತ್ಯೇಕವಾಗಿ ತೆಗೆದುಕೊಳ್ಳಬೇಕೆಂದು ಹೇಳಿ ತಮಗೆ ಕೊಟ್ಟಿದ್ದೇವೆ ಮತ್ತು ಇದನ್ನು convert ಏಕೆ ಮಾಡಬಾರದೆಂದರೆ ಇದು very very important ಮತ್ತು ಇದು adjournment motion ರೂಪದಲ್ಲಿ ಚರ್ಚೆಗೆ ಬಂದರೆ, ಇದಕ್ಕೊಂದು ವಿಶೇಷ ಮಹತ್ವವಿರುತ್ತದೆಂಬ ದೃಷ್ಟಿಯಿಂದ ಪ್ರಸ್ತಾಪ ಮಾಡಿದ್ದೇವೆ. ತಾವು ಸಾರಾಸಗಟಾಗಿ ತಳ್ಳಿಹಾಕಿದಿರಿ, ಇಲ್ಲವೇ ನಿಯಮ 69ರಡಿ ತೆಗೆದುಕೊಳ್ಳಿ ಅಂದರೆ ಹೇಗೆ? ಇದರ ಜೊತೆಗೆ ಬಿಎಂಐಸಿ ಪ್ರಾಜೆಕ್ಟ್ ಅನ್ನೂ ಸೇರಿಸಿ, ಸಣ್ಣದು, ದೊಡ್ಡದು ಎಲ್ಲವನ್ನೂ ಸೇರಿಸಿ ಒಂದೇ ಚರ್ಚೆ ಮಾಡಿ ಎಂದು ಮಾನ್ಯ ಪ್ರಕಾಶ್‌ರವರು ಹೇಳುತ್ತಾರೆ. ಅದು

11.20 A.M

ಬೇಡ ಆದುದರಿಂದ, ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದಿಷ್ಟೆ ಇದನ್ನು ನಿಲುವಳಿ ಸೂಚನೆ ರೂಪದಲ್ಲೇ ತಾವು ನಮಗೆ ಅಪ್ಪಣೆ ಕೊಟ್ಟರೆ, ಇದರ ಬಗ್ಗೆ ಸೀಮಿತವಾಗಿ ಚರ್ಚೆ ಮಾಡುವುದಕ್ಕೆ ಅವಕಾಶವಾಗುತ್ತದೆ ಮತ್ತು ಇದರಲ್ಲಿ legal points ಇರುವುದರಿಂದ ಮತ್ತು known offence under IPC and Prevention of Corruption Act ನೊಳಗೆ ಇದ್ದ ಕಾರಣ, ಸೀಮಿತವಾದ ಚರ್ಚೆಗೆ ನಮಗೆ ಅವಕಾಶ ಮಾಡಿಕೊಡಿ. ಇದರ ಮೇಲೆ ಅವರು ಉತ್ತರ ಕೊಡಲಿ, ಆಗ ನೋಡೋಣ. ಎಲ್ಲರಿಗೂ ಮಾತನಾಡುವುದಕ್ಕೆ ಬರುತ್ತದೆ, ನಡೆಯಲಿ, ಯಾರ್ಯಾರದ್ದು ಏನೇನು ಹೇಳಿಕೆಗಳು ಬರುತ್ತವೆ, ಅದಕ್ಕೆ ಏನೇನು ಉತ್ತರಗಳು ಬರುತ್ತದೆಂದು ಆನಂತರ ನೋಡೋಣ. ಆದರೆ, ನಿಯಮ 69ಕ್ಕೆ ಅದನ್ನು convert ಮಾಡುವುದಕ್ಕಿಂತಲೂ ನಿಲುವಳಿ ಸೂಚನೆಯಾಗಿಯೇ ತೆಗೆದುಕೊಂಡರೆ, ಅದಕ್ಕೆ ಮಹತ್ವ ಬರುತ್ತದೆಂದು ನಾನು ಮತ್ತೊಮ್ಮೆ ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ರಮೇಶ್‌ಕುಮಾರ್‌ರವರೇ, Merely a statement made in the Press or any subjet which appeared in the Press will not constitute material for an adjournment motion. ಆ ಬಗ್ಗೆ ಬೇಕಾದಷ್ಟು ರೂಲಿಂಗ್ಸ್ ಇದೆ. ಈಗ ಅದರ merit of the caseಗೆ ಹೋಗುವುದಿಲ್ಲ. ಒಂದು ಪತ್ರಿಕಾ ಹೇಳಿಕೆಯನ್ನು ಹಿಡಿದುಕೊಂಡು ಅದರ ಮೂಲಕ ನಿಲುವಳಿ ಸೂಚನೆ ತರುತ್ತೇವೆನ್ನುವುದು ಸರಿ ಅಲ್ಲ ಏಕೆಂದರೆ, ಅನೇಕ ಕಡೆಗಳಲ್ಲಾಗಿದೆ. ತಾವು ಹಾಗೂ ತಮ್ಮ ಹಿಂದಿನ ಘನತೆವೆತ್ತ ಅಧ್ಯಕ್ಷರುಗಳು ಅನೇಕ ರೂಲಿಂಗ್ಸ್ ಕೊಟ್ಟಿದ್ದಾರೆ. ಪತ್ರಿಕಾ ಹೇಳಿಕೆಯ ಆಧಾರದ ಮೇಲೆ ನಿಲುವಳಿ ಸೂಚನೆ ತರತಕ್ಕಂಥಾದ್ದು ಅಲ್ಲವೆಂದು ರೂಲಿಂಗ್ ಇದೆ. ಅದು ಏನಾದರೂ ಇರಲಿ. ತಾವು ಈ ಸೂಚನೆಯನ್ನು ಈಗಾಗಲೇ ಪರಿವರ್ತಿಸಿದ್ದೀರಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಈ ಸದನದಲ್ಲಿ ಇಲ್ಲದೇ ಇರುವವರು, ಹೊರಗಿನವರು ಬೇರೆ ಯಾರಾದರೂ ಮಾಡಿರತಕ್ಕಂಥ ಪತ್ರಿಕಾ ಹೇಳಿಕೆಯನ್ನು ಆಧಾರವಾಗಿಟ್ಟುಕೊಂಡು ಇಲ್ಲಿ ನಾವು ಚರ್ಚೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಹಾಗಾಗಿ, ಆ ರೀತಿ ನಾನು ಹೇಳಲಿಲ್ಲವೆಂದು ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಲಿ. ರಾಜ್ಯದ ಮುಖ್ಯಮಂತ್ರಿಗಳು ಮಾಡಿರತಕ್ಕಂಥ ಹೇಳಿಕೆಯನ್ನು ಚರ್ಚೆ ಮಾಡುವುದೂ ಕೂಡ ವಸ್ತುವಾಗುವುದಿಲ್ಲವೆಂದು ಶ್ರೀಮಾನ್ ಪ್ರಕಾಶ್‌ರವರು ಹೇಳುವುದಾದರೆ, ತಮಗೆ ಉದ್ದಂಡ ನಮಸ್ಕಾರಗಳು, ಏನಾಗಿದೆಯೆಂದು ಗೊತ್ತಾಗುತ್ತಿಲ್ಲ.

ಶ್ರೀ ಎಂ.ಪಿ. ಪ್ರಕಾಶ್: ನಮ್ಮ ನಿಯಮಾವಳಿಯೊಳಗೆ ನಮಗೆ ರಕ್ಷಣೆ ಇದೆ. One who cannot defend in this present House, his name cannot be taken ನಮ್ಮ ನಿಯಮಾವಳಿ ಇರತಕ್ಕಂಥಾದ್ದು, ಆದುದರಿಂದ, ಒಂದು ಅವಕಾಶ

ಕೊಡಬೇಕೆನ್ನುವ ಕಾರಣಕ್ಕಾಗಿ, ಯಾರು ಸದನದ ಸದಸ್ಯರಲ್ಲವೋ, ಅವರು ಅದನ್ನು ಸಮರ್ಥವಾಗಿ ಹೇಳುವುದಕ್ಕಾಗುವುದಿಲ್ಲ ಎನ್ನುವ ಕಾರಣಕ್ಕಾಗಿ ಅವರ ಹೆಸರನ್ನು ತೆಗೆದುಕೊಳ್ಳಬಾರದೆಂದು ಇದೆ. ಅದಕ್ಕೆ ರೂಲಿಂಗ್ ಬೇಕಾಗಿಲ್ಲ, ನಿಯಮ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಪ್ರಕಾಶ್‌ರವರೆ, ಮುಖ್ಯಮಂತ್ರಿಗಳೇ ಒಪ್ಪಿಕೊಂಡು ನಾನು ಹೇಳಿದ್ದು ಸರಿ, 58 ವರ್ಷಗಲ್ಲಿ ಸ್ವಾತಂತ್ರ್ಯ ಬಂದಾಗಿನಿಂದ ಏನೇನಾಗಿದೆಯೆಂದು ಅದಕ್ಕೆ ರೆಫರೆನ್ಸ್ ಕೂಡ ಕೊಟ್ಟು ಹೇಳಿದರು.

ಶ್ರೀ ಎಂ.ಪಿ. ಪ್ರಕಾಶ್: ಅವರು ಆ ತರಹದಲ್ಲಿ ಹೇಳಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಪತ್ರಿಕೆಯಲ್ಲಿ ಬಂದಿದ್ದು ಸರಿಯಿಲ್ಲ, ಅದರ ಆಧಾರದ ಮೇಲೆ ನೀವು ಚರ್ಚೆ ಮಾಡಬೇಡಿ ಎಂದರೆ ಅದನ್ನು ಒಪ್ಪಿಕೊಳ್ಳೋಣ. ನಾನು ಹೇಳಿದ್ದು ಸರಿ ಎಂದು ಅವರು ಹೇಳುವಾಗ ನೀವು ಅದನ್ನು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಹೋದರೆ ನಾವೇನು ಮಾಡಬೇಕು?

ಶ್ರೀ ಎಂ.ಪಿ. ಪ್ರಕಾಶ್: ತಾವು ಹಿರಿಯರಿದ್ದೀರಿ. ನಮಗಿಂತಲೂ ಹೆಚ್ಚು ಕಾಲ ಈ ಸದನದಲ್ಲಿ ಇದ್ದೀರಿ. ಯಾವುದೋ ಪತ್ರಿಕಾ ಹೇಳಿಕೆ ಮೇಲೆ ನಿಲುವಳಿ ಸೂಚನೆ ತಂದಿರತಕ್ಕಂಥಾದ್ದು ಇಲ್ಲ. ಈಗಾಗಲೇ ನಿಯಮ 69ರ ಕೆಳಗೆ ತಾವು ಪರಿವರ್ತಿಸಿದ್ದೀರಿ. ಸಣ್ಣದೂ ದೊಡ್ಡದನ್ನೂ ಜೊತೆಗೆ ಸೇರಿಸಿರುವುದರ ಬಗ್ಗೆ ನನ್ನ ವಾದ ಅಲ್ಲ. ಈಗ ಅದು ನಿಯಮ 69ರ ಕೆಳಗೆ ಇದ್ದೇ ಇರುತ್ತದೆ. ಸಮಯ ನಿಗಧಿಪಡಿಸುತ್ತೀರಿ. ಅದಕ್ಕೆ ಒಂದು ಗಂಟೆ ಕೊಡಬಹುದು ಅಥವಾ ಜಾಸ್ತಿ ಸಮಯ ಕೊಡುವುದು ತಮ್ಮ ವಿವೇಚನೆಗೆ ಬಿಟ್ಟದ್ದು. ಈಗ ಅದು ಆದ ತಕ್ಷಣ adjournment motion ಇಲ್ಲವೆಂದು ತಕ್ಷಣ second adjournment motion ಅನ್ನು ಶ್ರೀರಾಮರೆಡ್ಡಿಯವರು ಕೊಟ್ಟಿದ್ದಾರೆ. ಅದಕ್ಕೆ ತಾವು ಅವಕಾಶ ಕಲ್ಪಿಸಿಕೊಡಬೇಕು. ಅವರು ತಮ್ಮನ್ನು ಮನವೊಲಿಸಬೇಕು. ತಮ್ಮ ಮನವೊಲಿಸದೇ ಹೋದರೆ ತಾವು ಅದನ್ನು ತಿರಸ್ಕರಿಸಬಹುದು ಅಥವಾ ಇನ್ನೊಂದು ರೂಪದಲ್ಲಿ ತೆಗೆದುಕೊಳ್ಳಬಹುದು. ಅದನ್ನು ತಾವು ದಯವಿಟ್ಟು ಮಾಡಬೇಕೆಂದು ಹೇಳುತ್ತಾ, ನಿಯಮಾವಳಿ ಪ್ರಕಾರ ಸದನ ನಡೆಯಬೇಕೆಂಬುದು ನನ್ನ ಅರಿಕೆಯೇ ವಿನಾ ಯಾವುದನ್ನೂ ಮುಚ್ಚಿಡಬೇಕೆಂಬ ಪ್ರಯತ್ನ ಈ ಸಂದರ್ಭದಲ್ಲಿಲ್ಲ.

ಅಧ್ಯಕ್ಷರು: ಈಗ ನಿಯಮ 69ರ ಕೆಳಗೆ ನಾನು ತೆಗೆದುಕೊಳ್ಳುವುದಕ್ಕೆ ಇಚ್ಛಿಸಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ಒಂದು ಪ್ರಶ್ನೆ. ಈಗ ಎರಡು ನಿಲುವಳಿ ಸೂಚನೆಗಳು ತಮ್ಮ ಮುಂದಿದೆ. ಒಂದು, ವಿರೋಧ ಪಕ್ಷದ ನಾಯಕರು ಮಂಡಿಸಿರುವುದು, ಮತ್ತೊಂದು ಶ್ರೀರಾಮರೆಡ್ಡಿಯವರು, ಏಕಕಾಲಕ್ಕೆ ಕೊಟ್ಟಿದ್ದೇನೆಂದು ಹೇಳುತ್ತಿದ್ದಾರೆ. ತಮಗೆ ಅದು ಎಷ್ಟು ಹೊತ್ತಿಗೆ ಬಂದಿದೆಯೋ ನನಗೆ ಗೊತ್ತಿಲ್ಲ. ಎರಡರಲ್ಲಿ ತಾವು ಯಾವುದನ್ನು ಚರ್ಚೆಗೆ ತೆಗೆದುಕೊಳ್ಳುತ್ತೀರಿ? ಎರಡು ಬೇರೆ

ಬೇರೆ ವಿಚಾರಗಳಾಗಿವೆ. ಆದರೆ, ನೈಸ್ ಕಂಪನಿ ಬಗ್ಗೆ ಸಮಗ್ರವಾಗಿ ಚರ್ಚೆಯಾಗಬೇಕೆಂಬುದು ಶ್ರೀರಾಮರೆಡ್ಡಿಯವರ ವಾದ. ಅವರದ್ದು ಬಹಳ ಸೀಮಿತವಾಗಿ ಇವೆರಡರಲ್ಲಿ ಯಾವುದನ್ನು ತೆಗೆದುಕೊಳ್ಳಬೇಕೆಂಬುದಾಗಿದೆ. ನೈಸ್ ಕಂಪನಿ ಬಗ್ಗೆ ಸದನದಲ್ಲಿ ಸಮಗ್ರವಾಗಿ ಚರ್ಚೆಯಾಗಲೇಬೇಕು. ಚರ್ಚೆಯಾಗುವುದಕ್ಕೆ ಅವಕಾಶ ಮಾಡಿಕೊಡಬೇಕಾಗಿದೆ. ಆದುದರಿಂದ, ಎರಡು ನಿಲುವಳಿ ಸೂಚನೆಗಳಲ್ಲಿ ಯಾವ ನಿಲುವಳಿ ಸೂಚನೆಯನ್ನು ತಾವು ನಿಯಮ 69ಕ್ಕೆ ಪರಿವರ್ತಿಸಿದ್ದೀರಿ? ಯಾವುದನ್ನು ಒಪ್ಪೀದ್ದೀರಿ? ದಯವಿಟ್ಟು ತೀರ್ಮ ನೀಡಬೇಕು.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಒಂದು ನಿಮಿಷ. ನಾನು ಒಂದು ನಿಲುವಳಿ ಸೂಚನೆ ಕೊಟ್ಟಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರೂ ಕೊಟ್ಟಿದ್ದಾರೆ. ಅದು ಬೇರೆ ವಿಚಾರ. ನಾನು ಕೊಟ್ಟಿರತಕ್ಕಂಥಾದ್ದು ಬಿಎಂಐಸಿ ಬಗ್ಗೆ. ಈಗ ನಮ್ಮ ನಿಲುವಳಿ ಸೂಚನೆ ಮತ್ತು ಅವರ ನಿಲುವಳಿ ಸೂಚನೆ ಎರಡನ್ನೂ ಕ್ಲಬ್ ಮಾಡುವುದಕ್ಕೆ ಬರುವುದಿಲ್ಲ. ಏಕೆಂದರೆ, ವಿಷಯಗಳು ಬೇರೆ. ಅವರದೇ ಬೇರೆ, ನಮ್ಮದೇ ಬೇರೆ. ನನಗೂ ಈಗ ಮಾತನಾಡುವುದಕ್ಕೆ, preliminary submissionಗೆ ಅವಕಾಶ ಕೊಡುತ್ತೀರಾ ಅಥವಾ ಇಲ್ಲವೋ ಎನ್ನುವುದನ್ನು ತೀರ್ಮಾನ ಮಾಡಿ.

ಅಧ್ಯಕ್ಷರು: ನಿಮ್ಮದನ್ನು ನಾನು ತೆಗೆದುಕೊಂಡಿಲ್ಲ. ಅವರು ಮೊದಲು ಕೊಟ್ಟಿದ್ದರಿಂದ ತೆಗೆದುಕೊಂಡಿದ್ದೇನೆ. ಅವರು preliminary submissions ಎಲ್ಲಾ ಮಾಡಿದ್ದಾರೆ. ಅದನ್ನು ನಿಯಮ 69ರ ಕೆಳಗೆ ನಾನು ಚರ್ಚೆಗೆ ಅಂಗೀಕರಿಸಿದ್ದೇನೆ. ಅದಾದ ನಂತರ ನಿಮ್ಮದನ್ನು ಇನ್ನೊಂದು ರೂಪದಲ್ಲಿ ತೆಗೆದುಕೊಳ್ಳುತ್ತೇನೆ. ಒಂದು ದಿವಸ ಒಂದನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯ. ಎರಡನ್ನೂ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಈಗಲೇ ತೆಗೆದುಕೊಳ್ಳಿ ಎಂದು ನಾನು ಹೇಳುತ್ತಿಲ್ಲ. ನಾನು ನಿಲುವಳಿ ಸೂಚನೆ ಕೊಟ್ಟಿದ್ದೇನೆ. ಇವೊತ್ತು ತೆಗೆದುಕೊಳ್ಳುತ್ತೀರೋ, ಇಲ್ಲವೋ, ಅಷ್ಟೇ ನಾನು ಕೇಳುತ್ತಿರುವುದು.

ಅಧ್ಯಕ್ಷರು: ನಿಮ್ಮನ್ನು ಕರೆಯುತ್ತೇನೆ. ಈ ಚರ್ಚೆ ಮುಗಿದ ನಂತರ ನಾನು ನಿಮ್ಮನ್ನು ಕರೆಯುತ್ತೇನೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ದಯವಿಟ್ಟು ಕ್ಷಮಿಸಬೇಕು. ಅವರ ವಿಚಾರ ಬೇರೆ ನನ್ನ ವಿಚಾರ ಬೇರೆ. ನನ್ನ ನಿಲುವಳಿ ಸೂಚನೆಗೂ preliminary submisssionಗೂ ಅವಕಾಶ ಮಾಡಿಕೊಡಬೇಕು. ಏಕೆಂದರೆ, ನೀವು ಹೇಳುತ್ತಿರುವುದು ಎರಡು adjournment motions ಅನ್ನು ಒಂದೇ ದಿವಸ accept ಮಾಡುವುದಕ್ಕಾಗುವುದಿಲ್ಲವೆಂದು. ನಾನು adjournment motion ಕೊಟ್ಟಿದ್ದೇನೆ, ಅವರೂ ಕೊಟ್ಟಿದ್ದಾರೆ. ಆದರೆ, subjects ಬೇರೆ ಇದೆ. ಈಗ ಎರಡು adjournment

motion ಅನ್ನು ಒಂದೇ ದಿವಸ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದರೆ, ನಮ್ಮದನ್ನು ಇವೊತ್ತು ತೆಗೆದುಕೊಳ್ಳುತ್ತೀರಾ ಅಥವಾ ನಾಳೆ ತೆಗೆದುಕೊಳ್ಳುತ್ತೀರಾ? ಏನೆಂದು ಹೇಳಬೇಕು.

ಅಧ್ಯಕ್ಷರು: ಇದು ಮುಗಿದ ನಂತರ.... ಈಗ ನೀವು adjournment motion ಕೊಟ್ಟಿದ್ದೀರಿ. ಮೊದಲು ಅವರು ಕೊಟ್ಟಿದ್ದಾರೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಆಯಿತು, ನಮ್ಮದು ಏನೆಂದು ತೀರ್ಮಾನ ಮಾಡಿ.

ಅಧ್ಯಕ್ಷರು: ನಿಮ್ಮದನ್ನು ಇನ್ನೊಂದು ದಿವಸ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್: ಶ್ರೀರಾಮರೆಡ್ಡಿಯವರ ನಿಲುವಳಿ ಸೂಚನೆ ಬದುಕಿದೆಯೋ? ಇಲ್ಲವೋ? ಅದನ್ನಾದರೂ ಹೇಳಬೇಕಲ್ಲಾ, ತಾವು ಅದನ್ನು ಹೇಳಿ.

ಅಧ್ಯಕ್ಷರು: ನಾನು ಅದನ್ನೇ ಹೇಳುತ್ತಿದ್ದೇನೆ. ಒಂದು ನಿಲುವಳಿ ಸೂಚನೆ ತೆಗೆದುಕೊಂಡಿದ್ದೇನೆ. ಒಂದೇ ದಿವಸ ಎರಡು ನಿಲುವಳಿ ಸೂಚನೆಗಳನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಆದುದರಿಂದ, ನೀವು ಬೇರೆ ನಿಯಮಾವಳಿಯಲ್ಲಿ ಕಳುಹಿಸಿದರೆ, ಚರ್ಚೆಯಾದ ತಕ್ಷಣ I will take up that issue.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ನಿಲುವಳಿ ಸೂಚನೆಯನ್ನು ನಿಯಮ 69ರಡಿ convert ಮಾಡಿದ್ದೀರಲ್ಲಾ.

ಅಧ್ಯಕ್ಷರು: ಈಗ ನಿಯಮ 69ರ ಕೆಳಗೆ ತೆಗೆದುಕೊಂಡಿದ್ದೇನೆ, ದಯವಿಟ್ಟು ಮಾತನಾಡಿ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ನಮ್ಮದು ಹಾಗೂ ಶ್ರೀರಾಮರೆಡ್ಡಿಯವರ ನಿಲುವಳಿ ಸೂಚನೆಗಳು ಬಂದಿವೆ. ಇದಕ್ಕೆ ತಾವು ಅವಕಾಶ ಕಲ್ಪಿಸಿಕೊಡಬೇಕು. ನಮ್ಮ ನಿಲುವಳಿ ಸೂಚನೆಯಲ್ಲಿ ಇವೊತ್ತು ಮುಖ್ಯಮಂತ್ರಿಗಳ ಮೇಲೆ ಗುರುತರವಾದ ಮತ್ತು ಗಂಭೀರವಾದ ಆಪಾದನೆಗಳನ್ನು ಮಾಡಿದ್ದೇವೆ. ಬಿಎಂಐಸಿ ಪ್ರಾಜೆಕ್ಟ್ ಬಗ್ಗೆ ವಾಟಾಳ್ ನಾಗರಾಜ್ ಮತ್ತು ಶ್ರೀರಾಮರೆಡ್ಡಿಯವರು ಹೇಳಿದಂತೆ, 2–3 ದಿವಸಗಳ ಕಾಲವಾಗಲಿ, ಎಷ್ಟೇ ದಿವಸಗಳಾದರೂ ಮಾತನಾಡುತ್ತೇವೆ. ಅದರ ಬಗ್ಗೆ ಚರ್ಚೆಗೆ ಬಹಳಷ್ಟು ಅವಕಾಶ ಬೇಕಾಗುತ್ತದೆ. ಇವೊತ್ತು ಸದನದಲ್ಲಿ ಮುಖ್ಯಮಂತ್ರಿಗಳಿದ್ದಾರೆ. ಮುಖ್ಯಮಂತ್ರಿಗಳಲ್ಲಿ ನಾನು ವಿನಂತಿಸಿಕೊಳ್ಳುವುದೇನೆಂದರೆ, ಯಾವುದಾದರೂ ವಿಷಯ ಬಂದರೆ, ವಿಷಯಾಂತರ ಮಾಡತಕ್ಕಂಥ ರೀತಿಯಲ್ಲಿ ಹೋಗಬಾರದು. ನಾವೇನು 13ನೇ ತಾರೀಖು specific ಆಗಿ ನಾನು ಮುಖ್ಯಮಂತ್ರಿಯಾಗಿದ್ದಾಗ ಒಬ್ಬ ಮಾಜಿ ಮಂತ್ರಿ ಯಾರಿದ್ದರು, ಅವರ ಬಗ್ಗೆ ಹಾಗೂ ಮತ್ತೊಬ್ಬ ಪತ್ರಕರ್ತ ಮಿತ್ರರ ಬಗ್ಗೆ ತಾವು ಆಪಾದನೆ ಮಾಡಿದ್ದೀರಿ. ಇವೊತ್ತು IPC ಪ್ರಕಾರ ನಮ್ಮ ಎಲ್ಲಾ ಸ್ನೇಹಿತರೂ

11.30 A.M

ಉಲ್ಲೇಖಿಸಿದ್ದಾರೆ. ಇದು ದೊಡ್ಡ offence ಆಗಿದೆ. ಇವೊತ್ತು ರಾಜ್ಯದ ಮುಖ್ಯಮಂತ್ರಿಯಾಗಿ ಈ ತರಹದ ಹೇಳಿಕೆಗಳನ್ನು ನೀವು ನೀಡುತ್ತಿದ್ದೀರಿ. ಅದಕ್ಕೆ ನಿಲುವಳಿ ಸೂಚನೆ 69ರಲ್ಲಿ ಪರಿವರ್ತನೆ ಮಾಡಿದರೆ, ಹರಿಕಥೆ ಹೇಳತಕ್ಕಂಥ ರೀತಿಯಲ್ಲಿ ನಾವು ಇಲ್ಲಿ ಮಾಡುವುದಕ್ಕೆ ಬರುವುದಿಲ್ಲ. ಇವೊತ್ತು ಮುಖ್ಯಮಂತ್ರಿಗಳು specific ಅಗಿ ಹೇಳಬೇಕು. ನಾನು ಆ ರೀತಿಯಾಗಿ ಹೇಳಿಕೆ ನೀಡಿಲ್ಲ. ಹೇಳಿದ್ದರೆ ಅದರ ಬಗ್ಗೆ ಜವಾಬ್ದಾರಿಯಿಂದ ಉತ್ತರ ಕೊಡಬೇಕಾಗುತ್ತದೆ. ಅದಕ್ಕೆ ನಿಯಮ 69ರಲ್ಲಿ ಪರಿವರ್ತಿಸಿ ಅವಕಾಶ ಕೊಡತಕ್ಕಂಥಾದ್ದು, ತಮ್ಮದೇನಿದೆ, ನಾವೇನು adjournment motion ಕೊಟ್ಟಿದ್ದೇವೆ, ಇದರ ಮೇಲೆ ಚರ್ಚೆಯಾಗಬೇಕಾಗುತ್ತದೆ. ಮುಖ್ಯಮಂತ್ರಿಗಳು ಸದನದಲ್ಲಿದ್ದಾರೆ. ಇದಕ್ಕೆ ನೇರವಾದ ಉತ್ತರವನ್ನು ಅವರಿಂದ ಅಪೇಕ್ಷಿಸುತ್ತಿದ್ದೇವೆ.

ಅಧ್ಯಕ್ಷರು: ನಾನು ನಿಯಮ 69ರ ಅಡಿಯಲ್ಲಿ ಡಿಸ್‌ಕಷನ್‌ಗೆ ತೆಗೆದುಕೊಳ್ಳುತ್ತೇನೆಂದು ಹೇಳಿ ತೀರ್ಮ ಕೊಟ್ಟಿದ್ದೇನೆ. ಈಗ ಚರ್ಚೆಯನ್ನು ಆರಂಭ ಮಾಡಿ. ಇಲ್ಲದಿದ್ದರೆ ಮಧ್ಯಾಹ್ನ ಏನಾದರೂ ಚರ್ಚೆ ಮಾಡುತ್ತಿರಾ ಅಥವಾ ಈಗಲೇ ನೇರವಾಗಿ ಚರ್ಚೆಯಲ್ಲಿ ಭಾಗವಹಿಸುತ್ತೀರೋ ದಯಮಾಡಿ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಇದನ್ನು adjournment motion ರೂಪದಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕು ಎಂಬ ವಾದ ನಮ್ಮದು.

ಅಧ್ಯಕ್ಷರು: ತಾವು ಪ್ರಿಲಿಮಿನರಿ ಸಬ್‌ಮಿಷನ್‌ನಲ್ಲಿ ವಾದ ಮಾಡಿದ್ದೀರಿ. ನಾನು ಅದನ್ನು ಕೇಳಿ ನನ್ನ ರೂಲಿಂಗ್‌ನ್ನು ಕೊಟ್ಟಿದ್ದೇನೆ. ಈಗ ದಯಮಾಡಿ ನೇರವಾಗಿ ಚರ್ಚೆಗೆ ಹೋಗೋಣ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ: ಪ್ರಿಲಿಮಿನರಿ ಸಬ್‌ಮಿಷನ್ ಯಾವಾಗಲೂ ಮಾಡುವುದು ಏಕೆಂದರೆ ನಿಮ್ಮ ಮನವೊಲಿಸುವುದಕ್ಕೋಸ್ಕರ. ನಾವು ಎಷ್ಟೇ ಪ್ರಯತ್ನ ಮಾಡಿದರೂ ಸಹ ನೀವು ನಮಗೆ ಒಲಿಯುತ್ತಿಲ್ಲ. ನಿಮ್ಮ ಒಲವು ಯಾವಾಗಲೂ ಕೂಡ ಆ ಕಡೆಯೇ ಜಾಸ್ತಿ ಇದೆ.

ಅಧ್ಯಕ್ಷರು: ನಾನು ನಿಯಮ 69ರ ಕೆಳಗಡೆ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೇನೆ. ದಯಮಾಡಿ ನೀವು ಹೇಳಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ: ಯಡಿಯೂರಪ್ಪ ಹಾಗೂ ಕುಮಾರಸ್ವಾಮಿಯವರ ಕಡೆಗೆ ನಿಮಗೆ ಒಲವು ಜಾಸ್ತಿ. ಈ ಕಡೆ ಸ್ವಲ್ಪ ನೋಡಿ. ಆದ್ದರಿಂದ ತಾವು adjournment motion ಗೆ ಅವಕಾಶ ಮಾಡಿಕೊಡಿ. It has got importance.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ನಿಮ್ಮ ರೂಲಿಂಗ್‌ನ್ನು ಎಷ್ಟು ಬಾರಿ ಇವರು ಪ್ರಶ್ನೆ ಮಾಡುತ್ತಾರೋ ನನಗಂತೂ ಅರ್ಥವಾಗುವುದಿಲ್ಲ.

ಹಿರಿಯರಾದ ಮಾನ್ಯ ರಮೇಶ್‌ಕುಮಾರ್‌ರವರು ಇಲ್ಲಿ ಕುಳಿತಿದ್ದಾರೆ. ನಾವು ಇಲ್ಲಿ ಕುಳಿತು ಅವರು ಕೊಟ್ಟಿದ್ದ ರೂಲಿಂಗ್‌ನ್ನು ಕೇಳುತ್ತಿದ್ದಾಗ ಅವರು ನನ್ನ ರೂಲಿಂಗ್‌ನ್ನೇ ಪ್ರಶ್ನೆ ಮಾಡುತ್ತೀರಾ ಎಂದು ಹೇಳುತ್ತಿದ್ದರು. ಸಭಾಧ್ಯಕ್ಷರ ರೂಲಿಂಗ್‌ಗೆ ಪ್ರಶ್ನೆ ಮಾಡುವ ಹಕ್ಕಿಲ್ಲವೆಂದು ಒತ್ತಿ ಒತ್ತಿ ನಮಗೆ ಮಾನ್ಯ ರಮೇಶ್ ಕುಮಾರ್‌ರವರು ಹೇಳುತ್ತಿದ್ದರು.

ಶ್ರೀ ಡಿ.ಕೆ. ಶಿವಕುಮಾರ್: ಆ ರೂಲಿಂಗ್‌ನ್ನು ಒಪ್ಪದೆಯೇ ನೀವು ಇಲ್ಲಿ ಬಂದು ಕುಳಿತುಬಿಟ್ಟಿದ್ದೀರಲ್ಲಾ?

ಶ್ರೀ ಕೆ.ಎಸ್. ಈಶ್ವರಪ್ಪ: ಆ ರೂಲಿಂಗ್‌ನ್ನು ಒಪ್ಪಿಕೊಂಡೇ ಇಲ್ಲಿ ಬಂದು ಕುಳಿತಿದ್ದೆವು. ಅದಕ್ಕೋಸ್ಕರ ಇಲ್ಲಿಗೆ ಬಂದೆವು. ತಾವು ದಯವಿಟ್ಟು ಅರ್ಥ ಮಾಡಿಕೊಳ್ಳಿ. ಅವರು ಕೊಟ್ಟಂಥ ರೂಲಿಂಗ್‌ನ್ನು ಒಪ್ಪಿಕೊಂಡಿದ್ದರಿಂದ...

ಶ್ರೀ ಡಿ.ಕೆ. ಶಿವಕುಮಾರ್: ತಾವು ಒಂದೂವರೆ ದಿವಸ ಕುಳಿತಿದ್ದಿರಲ್ಲಾ?

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಶಿವಕುಮಾರ್‌ರವರೆ, ತಮಗೆ ಗೊತ್ತಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್: ತಾವು ಬಂದಾಗಿನಿಂದ ಈ ಸಭೆಯಲ್ಲಿ ಇದ್ದೇನಲ್ಲಾ?

ಶ್ರೀ ಕೆ.ಎಸ್. ಈಶ್ವರಪ್ಪ: ಇದ್ದೀರಿ, ಬಹಳ ಸುಳ್ಳು ಹೇಳುತ್ತೀರಿ, ಅದಕ್ಕೆ ನಾನು ಹೇಳುತ್ತಿರುವುದು, ನಾನು ಹೇಳುತ್ತಿರುವುದು ಬೇರೆ?

ಶ್ರೀ ಡಿ.ಕೆ. ಶಿವಕುಮಾರ್: ಸುಳ್ಳು ನಿಮ್ಮ ಮೈಗೂಡಿಸಿದೆ, ನಾನೆಲ್ಲಿ ಸುಳ್ಳು ಹೇಳಿದೆ? ಹೇಳಿ ನೋಡೋಣ.

ಶ್ರೀ ಕೆ.ಎಸ್. ಈಶ್ವರಪ್ಪ: ತಾವು ಸ್ವಲ್ಪ ಕುಳಿತುಕೊಳ್ಳಿ. ನೀವು ಏನು ಸುಳ್ಳು ಹೇಳಿದಿರಿ ಎಂದು ನಾನು ಹೇಳುತ್ತೇನೆ. ನೀವು ಕುಳಿತುಕೊಂಡರೆ ನಾನು ಹೇಳಬಹುದು.

ಶ್ರೀ ಡಿ.ಕೆ. ಶಿವಕುಮಾರ್: ಹೇಳಿ, ಏನು ಸುಳ್ಳು ಹೇಳಿದೆ ಹೇಳಿ?

ಶ್ರೀ ಕೆ.ಎಸ್. ಈಶ್ವರಪ್ಪ: ನಾನು ಹೇಳುವುದು ಇಷ್ಟೆ ಸ್ಪೀಕರ್‌ರವರು ಕೊಟ್ಟಂಥ ರೂಲಿಂಗ್‌ನ್ನು ನಾವು ಒಂದು ಸಲ ಕೇಳಿದ್ದೇವೆ. ಕೇಳಿದ ಮೇಲೆ ನಾವು ಕುಳಿತೆವು. ಕೂತಮೇಲೆ ನೀವು ಕೊಟ್ಟಂಥ ರೂಲಿಂಗ್‌ನ್ನು accept ಮಾಡಿಕೊಂಡಿದ್ದಕ್ಕೋಸ್ಕರ, ಪ್ರಜಾಪ್ರಭುತ್ವಕ್ಕೆ ಗೌರವ ಕೊಟ್ಟಿದ್ದಕ್ಕೋಸ್ಕರ ನಾವು ಇಲ್ಲಿಗೆ ಬಂದು ಕುಳಿತಿದ್ದೇವೆ. ನಾನು ಹೇಳಲು ಹೊರಟಿದ್ದು ಇದನ್ನೇ, ಬೇರೆ ಇನ್ನೇನನ್ನಲ್ಲ. ನಿಮ್ಮ ರೂಲಿಂಗ್ ಎಷ್ಟು ಬಾರಿ ಪ್ರಶ್ನೆ ಮಾಡಲು ಇವರಿಗೆ ಅಧಿಕಾರ ಇದೆ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ: ನೀವು ಎಲ್ಲಿಯವರೆಗೆ ಅಲೋ ಮಾಡುತ್ತೀರೋ ಅಲ್ಲಿಯವರೆಗೆ ಅಧಿಕಾರವಿದೆ!

ಶ್ರೀ ಕೆ.ಆರ್. ರಮೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ನಾವು ನಿಲುವಳಿ ಸೂಚನೆಗೆ ತಮ್ಮ ಕಛೇರಿಗೆ ನೋಟೀಸ್ ಕೊಟ್ಟಿದ್ದೇವೆ. ಪ್ರಾಸ್ತಾವಿಕ ವರದಿ ಸಲ್ಲಿಸುವುದಕ್ಕೆ ತಾವು ನಮಗೆ ಕೆಲವರಿಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಮುಂದಕ್ಕೆ ಹೋಗಬೇಕು.

ನೀವು ಬೇರೆ ನಿಯಮದಲ್ಲಿ ಚರ್ಚೆ ಮಾಡೋಣವೆಂದು ಹೇಳುತ್ತಿದ್ದೀರಿ. ನಮಗೆ ಮಾನ್ಯತೆ ಪಡೆದ ವಿರೋಧ ಪಕ್ಷವಾಗಿ ರಾಜ್ಯದ ಹಿತದೃಷ್ಟಿಯಿಂದ ಇದು ಬಹಳ ಗಂಭೀರವಾದ ವಿಷಯ. ನಾವು ನಿಲುವಳಿ ಸೂಚನೆಯಲ್ಲೇ ಇದರ ಬಗ್ಗೆ ಚರ್ಚೆಯಾಗಬೇಕೆಂದು ಪಟ್ಟು ಹಿಡಿಯತಕ್ಕವರು. ನಮ್ಮ ನಿಯಮಾವಳಿಯ ಪ್ರಕಾರ ಅವಕಾಶ ಇರತಕ್ಕದ್ದು, ನೀವು 64(2)ಕ್ಕೆ ಹೋಗಿ, ಯಾರು ನಿಲುವಳಿ ಸೂಚನೆ ತೆಗೆದುಕೊಳ್ಳಬೇಕೆಂದು ಹೇಳಿ, ಅದರ ಪರವಾಗಿ ಎದ್ದುನಿಲ್ಲಿ ಎಂದರೆ ಅದಕ್ಕೆ ಅವಕಾಶ ಕೊಡಬೇಕೋ ಬೇಡವೋ ಎಂದು 23 ಜನ ಇಲ್ಲಿ ಎದ್ದು ನಿಂತರೆ ತಾವು ಅವಕಾಶ ಕೊಡಬೇಕಾಗುತ್ತದೆ. ಇಲ್ಲ ನನ್ನ discretion use ಮಾಡುತ್ತಿದ್ದೇನೆ, ಆ ಪ್ರಶ್ನೆಯೇ ಇಲ್ಲವೆಂದು ನೀವು ಹೇಳುವುದಾದರೆ, ರೂಲಿಂಗ್‌ನ್ನು ಪ್ರಶ್ನೆ ಮಾಡುವುದು ಬೇರೆ, ಪ್ರಜಾಸತ್ತಾತ್ಮಕವಾಗಿ ನಮ್ಮ ಪ್ರತಿಭಟನೆ ಮಾಡುವುದೇ ಬೇರೆ, ನಮ್ಮ ನಿರ್ಣಯಕ್ಕೆ ನಾವು ಬರುತ್ತೇವೆ. The option is before you. Either would you take recource under section (2) of section 64 of Rules of Procedure of this House or will you take your own decision, so that we can take our decision.

ಅಧ್ಯಕ್ಷರು: ಮಾನ್ಯ ರಮೇಶ್‌ಕುಮಾರ್‌ರವರೇ, already I have given my ruling. ನೀವೇನು ಪ್ರಸ್ತಾಪ ಮಾಡಿದ್ದೀರಿ ಅದನ್ನು ನಿಯಮ 69ರ ಅಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಹೇಳಿದ್ದೇನೆ.

(ಗೊಂದಲ)

ಆದ್ದರಿಂದ ತಾವುಗಳ ಸಹಕಾರ ಕೊಡಬೇಕಾಗುತ್ತದೆ. ದಯಮಾಡಿ ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಾರಂಭ ಮಾಡಿ.

ಶ್ರೀ ಡಿ.ಕೆ. ಶಿವಕುಮಾರ್: ಇದನ್ನು adjournment motion ಮೇಲೆ ತೆಗೆದುಕೊಳ್ಳಬೇಕೆಂದೂ ಅಥವಾ ಬೇರೆಯದೊ?

MR. SPEAKER: Already I have given my ruling. It has been converted under Rule 69 of discussion. Discussion start ಮಾಡಿ ಎಂದು ಹೇಳಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್: ತಾವು ಇದನ್ನು ಈಗಾಗಲೇ ನಿಯಮ 69ಕ್ಕೆ ಕನ್‌ವರ್ಟ್ ಮಾಡಿ ಟೈಮ್ ನಿಗದಿ ಮಾಡಿ ರೂಲಿಂಗ್ ಕೊಟ್ಟಿದ್ದೀರಿ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಇನ್ನೊಂದು ಸಲ ನಾನು ತಮ್ಮಲ್ಲಿ ನಮ್ರತೆಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ನಾವು ನಿಲುವಳಿ ಸೂಚನೆಯ ಅಡಿಯಲ್ಲೇ ಇದನ್ನು ಚರ್ಚೆ ಮಾಡಬೇಕೆಂದು ತಮ್ಮ ಮೇಲೆ ಒತ್ತಾಯ ಪೂರ್ವಕವಾಗಿ ಬೇಡಿಕೆಯನ್ನು ತರುತ್ತಿದ್ದೇವೆ. ತಾವು ತಮ್ಮ ಅಂಗೀಕಾರವನ್ನು ತಡೆಹಿಡಿಯುತ್ತೀರೋ ಅಥವಾ ನಮಗೆ ಅವಕಾಶ ಕೊಡುತ್ತೀರೋ ಎರಡರಲ್ಲಿ ಒಂದು ಮಾತನ್ನು ಹೇಳಿ. ನಿಯಮ 69ರ ಅಡಿಯಲ್ಲಿ ನಾವು ಚರ್ಚೆಗೆ ತಯಾರಾಗಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ತಾವು ಈಗಾಗಲೇ ತಮ್ಮ ರೂಲಿಂಗ್‌ನ್ನು ಕೊಟ್ಟಿದ್ದೀರಿ. ಈ ನಿಲುವಳಿ ಸೂಚನೆಯನ್ನು ನಿಯಮ 69ರ ಅಡಿಯಲ್ಲಿ ಚರ್ಚೆಗೆ ಕನ್‌ವರ್ಟ್ ಮಾಡಿದ್ದೀರಿ. ಅವರು ಅದರಲ್ಲಿ ಚರ್ಚೆ ಮಾಡಲಿ ಎಂದು ತಾವು ಈಗಾಗಲೇ ಹೇಳಿದ್ದೀರಿ. ಸರ್ಕಾರವೂ ಚರ್ಚೆಗೆ ಸಿದ್ದವಿದೆ.

ಅಧ್ಯಕ್ಷರು: ನಿಯಮ 69ರ ಅಡಿಯಲ್ಲಿ ಚರ್ಚೆಗೆ ರೂಲಿಂಗ್‌ನ್ನು ಕೊಟ್ಟಿದ್ದೇನೆ. ಅದನ್ನು ಉಪಯೋಗ ಮಾಡಿಕೊಳ್ಳುವುದು ಬಿಡುವುದು ತಮ್ಮ ವಿವೇಚನೆಗೆ ಬಿಟ್ಟಿದ್ದು. You can't enforce.

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಈವತ್ತು ಈ ಸದನದಲ್ಲಿ ನಮ್ಮ ನಿಲುವಳಿ ಸೂಚನೆ ಏನಿದೆ ಅದು specific purpose ಗಾಗಿ ರಾಜ್ಯದ ಮುಖ್ಯಮಂತ್ರಿಗಳಾಗಿ 13ನೇ ತಾರೀಖು ಕೊಟ್ಟಂಥ ಒಂದು ಹೇಳಿಕೆ ಏನಿದೆ, ಅದರ ಬಗ್ಗೆ ನಾವು question ಮಾಡಿದ್ದೇವೆ. ಈವತ್ತು ಪೀನಲ್ ಕೋಡ್‌ನಲ್ಲಿ ಕೂಡ ಕನ್ನಡ ರಾಜ್ಯದ ಮುಖ್ಯಮಂತ್ರಿಗಳಾಗಿ ಇಂಥ ಒಂದು offence ಮಾಡಿದ್ದಾರೆ ಎಂದು ಗುರುತರವಾದಂಥ ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇವೆ. ಈವತ್ತು ಇದಕ್ಕೆ 69ರಲ್ಲಿ ಚರ್ಚೆಯಾಗಬೇಕೆಂದು ಎಲ್ಲರೂ ಪಾಲುಗೊಳ್ಳತಕ್ಕ ರೀತಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳೂ ಇಲ್ಲಿದ್ದಾರೆ.XX

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರು you are accusing the Chair.

SRI. DHARAM SINGH: You are forcing us to say like that.

ಅಧ್ಯಕ್ಷರು: ಈ ಹಿಂದೆ ಈ ಪೀಠದಲ್ಲಿ ಕೂತಿದ್ದವರು ಬೇಕಾದಷ್ಟು ರೂಲಿಂಗ್ಸ್‌ನ್ನು ಕೊಟ್ಟಿದ್ದಾರೆ. ಮಾನ್ಯ ರಮೇಶ್‌ಕುಮಾರ್‌ರವರು ರೂಲಿಂಗ್ಸ್‌ನ್ನು ಕೊಟ್ಟಿದ್ದಾರೆ. ಇಂಥ ಪ್ರಕರಣಗಳಲ್ಲಿ ನಿಯಮ 69ರಲ್ಲಿ ಚರ್ಚೆಗೆ ರೂಲಿಂಗ್ಸ್‌ನ್ನು ಕೊಟ್ಟಿದ್ದಾರೆ.

ಶ್ರೀ ಎನ್. ಧರ್ಮಸಿಂಗ್: ಕೊಟ್ಟಿದ್ದಾರೆ. ಈವತ್ತು ರಾಜ್ಯದಲ್ಲಿ ಏನು ನಡೆಯುತ್ತಿದೆ, ಜನರು ಏನು ನಿರೀಕ್ಷಣೆ ಮಾಡುತ್ತಿದ್ದಾರೆ.

MR. SPEAKER: This is not good on your part being a senior leader.

ಶ್ರೀ ಎನ್. ಧರ್ಮಸಿಂಗ್: ಅದಕ್ಕೆ ನಾವು ಪ್ರತಿಭಟನೆ ಮಾಡುತ್ತೇವೆ. ಈ ಸರ್ಕಾರ ನಮ್ಮ ನೆರವಿಗೆ ಬರುತ್ತಿಲ್ಲ. ಮುಖ್ಯಮಂತ್ರಿಗಳು ಸಮರ್ಪಕವಾದ ಉತ್ತರವನ್ನು ಕೊಡುತ್ತಿಲ್ಲ. ನಿಯಮ 69ರ ಅಡಿಯಲ್ಲಿ ಚರ್ಚೆಗೆ ನಾವು ಸಿದ್ಧರಿಲ್ಲ.

(ಗೊಂದಲ)

XX ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

11.38 A.M

ಶ್ರೀ ಕೆ.ಎಸ್. ಈಶ್ವರಪ್ಪ: ಇವರು ಕೊಟ್ಟಿರತಕ್ಕದ್ದನ್ನು ನಿಲುವಳಿ ಸೂಚನೆಯಲ್ಲೇ ತೆಗೆದುಕೊಳ್ಳಬೇಕೆಂದರೆ ಹೇಗೆ? ನಿಲುವಳಿ ಸೂಚನೆಯನ್ನು ನಿಲುವಳಿ ಸೂಚನೆಯಲ್ಲೇ ಆಗಬೇಕು ಎನ್ನುವಂಥ ಒತ್ತಾಯ ಮಾಡುತ್ತಿರುವುದು ಇಡೀ ದೇಶದಲ್ಲೇ ಮೊದಲು ಇದು.

(ಗೊಂದಲ)

(ಈ ಹಂತದಲ್ಲಿ ಕಾಂಗ್ರೇಸ್ ಪಕ್ಷದ ಸದಸ್ಯರು ಬಾವಿಗೆ ಬಂದು ಧರಣಿ ಹೂಡಿದರು)

ಶ್ರೀ ಆರಗ ಜ್ಞಾನೇಂದ್ರ: ಕಾಂಗ್ರೆಸ್‌ನವರು ವಿರೋಧ ಪಕ್ಷದಲ್ಲಿ ಕುಳಿತಾಗಲೆಲ್ಲಾ ಇದೇ ಹಣೆಯ ಬರಹ. ಸ್ಪೀಕರ್ ರೂಲಿಂಗ್‌ನ್ನೇ ಪ್ರತಿಭಟನೆ ಮಾಡುವಂಥದ್ದು, ಸ್ಪೀಕರ್ ಸ್ಥಾನಕ್ಕೆ ಅಗೌರವ ಕೊಡತಕ್ಕದ್ದು.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ತಾವು ಕೊಟ್ಟಂತಹ ತೀರ್ಪನ್ನು ಪ್ರಶ್ನಿಸಿ ಈ ರೀತಿ ಧರಣಿ ಮಾಡುವುದು ವಿರೋಧ ಪಕ್ಷದವರಿಗೆ ಶೋಭೆ ತರುವುದಿಲ್ಲ.

ಅಧ್ಯಕ್ಷರು: ಮಾನ್ಯ ಸದಸ್ಯರಲ್ಲಿ ನನ್ನ ಮನವಿ ಏನೆಂದರೆ, ಈಗ ಏನು ನಿಲುವಳಿ ಸೂಚನೆಯನ್ನು ನೀವು ತಂದಿದ್ದೀರಿ, ಅದಕ್ಕೆ ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಶ ಕೊಟ್ಟಿದ್ದೇನೆ. ಎಲ್ಲವನ್ನೂ ಕೇಳಿದ್ದೇನೆ. ಅದನ್ನು ನಿಯಮ 69ರ ಕೆಳಗೆ discussion ಗೆ allow ಮಾಡಿದ್ದೇನೆ. ಅದನ್ನು ಉಪಯೋಗಿಸಿಕೊಂಡು ಏನನ್ನು ಹೇಳಬೇಕೋ ಅದನ್ನು ಹೇಳಿ. ನೀವು ಹೇಳುವುದೆಲ್ಲ ರಾಜ್ಯದ ಜನತೆಗೆ ತಲುಪತಕ್ಕದ್ದು. ಆದ್ದರಿಂದ ದಯಮಾಡಿ ತಾವು ಏನು ಹೇಳಬೇಕಾಗಿದೆಯೋ ಅದನ್ನು ಹೇಳಬೇಕೆಂದು ಮತ್ತೊಮ್ಮೆ ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಈ ರೀತಿಯೇ ಮಾಡಬೇಕು, ಹೀಗೆಯೇ ಮಾಡಬೇಕೆಂದು you can't direct the Chair. I have heard preliminary submissions, I have given my ruling. ಆದ್ದರಿಂದ ದಯಮಾಡಿ ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕು ಮತ್ತು ಚರ್ಚೆಯನ್ನು ಆರಂಭ ಮಾಡಬೇಕೆಂದು ಮತ್ತೊಮ್ಮೆ ವಿನಂತಿ ಮಾಡುತ್ತೇನೆ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ: ಕಾಂಗ್ರೆಸ್‌ನವರು ವಿರೋಧ ಪಕ್ಷದಲ್ಲಿ ಕೆಲಸ ಮಾಡಲು ವಿಫಲರಾಗಿದ್ದಾರೆ. ಚರ್ಚೆಗೆ ಇವರ ಹತ್ತಿರ ಬಂಡವಾಳವಿಲ್ಲ. ಅದಕ್ಕೋಸ್ಕರ ತಮ್ಮ ರೂಲಿಂಗ್‌ನ್ನು ಪ್ರತಿಭಟನೆ ಮಾಡುತ್ತಿದ್ದಾರೆ. ಇದು ಅವಹೇಳನಕಾರಿ ಪರಿಸ್ಥಿತಿ. ವಿರೋಧ ಪಕ್ಷವಾಗಿ ಕೆಲಸ ಮಾಡುವಲ್ಲಿ ವಿಫಲರಾಗಿದ್ದಾರೆ.

ಅಧ್ಯಕ್ಷರು: ಈಗ ಸದನವನ್ನು ಅರ್ಧ ಗಂಟೆ ಕಾಲ ಮುಂದೂಡಲಾಗಿದೆ.

(ಸದನವು 11 ಗಂಟೆ 38 ನಿಮಿಷಕ್ಕೆ ಮುಂದೂಡಲ್ಪಟ್ಟು ಅರ್ಧ ಗಂಟೆ ನಂತರ ಸಮಾವೇಶಗೊಳ್ಳಲು ನಿರ್ಧರಿಸಿತು)

1.35 P.M

ಸದನವು ಮತ್ತೆ ಮಧ್ಯಾಹ್ನ 1 ಗಂಟೆ 35 ನಿಮಿಷಕ್ಕೆ ಪ್ರಾರಂಭವಾಯಿತು ಸನ್ಮಾನ್ಯ ಸಭಾಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು

ಅಧ್ಯಕ್ಷರು: ಭೋಜನಕ್ಕೋಸ್ಕರ ಈ ಸದನವನ್ನು 3 ಗಂಟೆ 30 ನಿಮಿಷಕ್ಕೆ ಮತ್ತೆ ಸೇರುವಂತೆ ಮುಂದೂಡಲಾಗಿದೆ.

ಸದನವು 1 ಗಂಟೆ 35 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ಮಧ್ಯಾಹ್ನ 3 ಗಂಟೆ 30 ನಿಮಿಷಕ್ಕೆ ಸೇರಲು ನಿಶ್ಚಯಿಸಿತು

3. ವಿರೋಧ ಪಕ್ಷದ ನಾಯಕರುಗಳಿಂದ ಧರಣಿ:

ವಿಷಯ: ನಿಲುವಳಿ ಸೂಚನೆ ಮೇರೆಗೆ ಚರ್ಚೆ ಮಾಡಲು ಒತ್ತಾಯ

(ಸದನವು ಮತ್ತೆ ಮಧ್ಯಾಹ್ನ 3 ಗಂಟೆ 52 ನಿಮಿಷಕ್ಕೆ ಸೇರಿತು)

(ಮಾನ್ಯ ಸಭಾಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಬಾವಿಯಲ್ಲಿ ನಿಂತು ಧರಣಿಯಲ್ಲಿ ಪಾಲ್ಗೊಂಡಿದ್ದರು)

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೇ, ಈಗ ಕಾಂಗ್ರೆಸ್ ಪಕ್ಷದ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರು ಧರಣಿ ಮಾಡುತ್ತಿದ್ದಾರೆ; ಮತ್ತೊಮ್ಮೆ ತಾವು ಎಲ್ಲಾ ಪಕ್ಷದ ಮುಖಂಡರನ್ನು ಕರೆದು ಅವರೊಂದಿಗೆ ಮಾತುಕತೆ ಆಡುವುದು ಒಳ್ಳೆಯದು ಎಂಬ ಸಲಹೆಯನ್ನು ನಾನು ಕೊಡಬಯಸುತ್ತೇನೆ. ಈಗ ಸದನವನ್ನು ಇಪ್ಪತ್ತು ನಿಮಿಷಕ್ಕೆ ಮುಂದಕ್ಕೆ ಹಾಕಿ, ಮತ್ತೆ ಒಂದು ಮಾತುಕತೆ ಆಡೋಣ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಏಕೆಂದರೆ ಅನೇಕ ಸಾರಿ ಇಂತಹ ಸಂದರ್ಭಗಳು ಬರುತ್ತದೆ. ಈಗ ಒಂದು ವಿಚಾರ. ನಾವು ಹೇಳುವುದನ್ನು ಹೇಳುತ್ತೇವೆ. ನೀವು ಕೇಳುವುದು ಬಿಡುವುದು ನಿಮಗೆ ಸೇರಿದ್ದು. ನಮಗೆ ಸದನದಲ್ಲಿ ಹೇಳುವುದಕ್ಕೆ ಹಕ್ಕಿದೆ. ಅಧಿಕೃತ ಪಕ್ಷದ ನಾಯಕರು ಮಾತನಾಡಲಿ. ಬೇಡವೆನ್ನುವುದಿಲ್ಲ. ನಮಗೆ ಸದನದಲ್ಲಿ ನಿಮಗೆ ಸಲಹೆ ಕೊಡಲಿಕ್ಕೆ ಅಧಿಕಾರವಿದೆ. ನೀವು ಕೇಳುವುದು ಬಿಡುವುದು ಒಳ್ಳೆಯದು. ಅವರು ತಮ್ಮ ಇಚ್ಛೆ ಬಂದ ಹಾಗೆ ಮಾಡಲಿ. ನಾವು ಹೇಳುವುದಕ್ಕೆ ಅಧಿಕಾರವಿಲ್ಲವೆಂದು ಶಿವಕುಮಾರ್‌ರವರು ಕೂಗಾಡುವುದು ಸರಿಯಲ್ಲ. ಆಯಿತು. ನಾವೂ ಧರಣಿಗೆ ಬರುತ್ತೇವೆ.

(ಗೊಂದಲ)

ಶ್ರೀ ಎನ್. ಧರಂಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಸಭಾಧ್ಯಕ್ಷರೇ, ಇವತ್ತು ನಾವು ನಿಲುವಳಿ ಸೂಚನೆಯನ್ನು ಮಂಡನೆ ಮಾಡಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು): ತಾವು ಯಾವುದೇ ರೀತಿ ಎಷ್ಟು ಗಂಟೆ ಬೇಕಾದರೂ ಚರ್ಚೆ ಮಾಡಲಿಕ್ಕೆ ಅವಕಾಶ ಇದೆ. ಈಗ

ತಮ್ಮ ನಿಲುವಳಿ ಸೂಚನೆ 69ಕ್ಕೆ ಪರಿವರ್ತನೆ ಮಾಡಿದ್ದಾರೆ. ಒಂದು ಸಾರಿ ಸ್ಪೀಕರ್ ಅವರು ರೂಲಿಂಗ್ ಕೊಟ್ಟ ಮೇಲೆ ಅದನ್ನು ಪ್ರಶ್ನೆ ಮಾಡುವುದು ಸರಿ ಅಲ್ಲ. ಇಷ್ಟೊಂದು ಅನುಭವವುಳ್ಳಂಥವರು, ಕೇಂದ್ರದಲ್ಲಿ, ಬೇರೆ ಬೇರೆ ರಾಜ್ಯದಲ್ಲಿ ಆಡಳಿತ ನಡೆಸಿರುವಂತಹ ಇಷ್ಟು ಅನುಭವವುಳ್ಳವರು ಸ್ಪೀಕರ್‌ರವರ ರೂಲಿಂಗ್ ಅನ್ನು ಪ್ರಶ್ನೆ ಮಾಡಿ ವೆಲ್‌ಗೆ ಬರುವಂತಹ ನಿಮ್ಮಂಥ ಹಿರಿಯರಿಗೆ ನೂರು ವರ್ಷದ ಇತಿಹಾಸವಿರುವಂತಹ ಕಾಂಗ್ರೆಸ್ ಪಾರ್ಟಿಗೆ ಇದು ಸರಿಯೇ ಎಂಬ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಉಪ ಮುಖ್ಯಮಂತ್ರಿಗಳು ಏನು ಮಾತನಾಡಿದ್ದಾರೆ.....

ಶ್ರೀ ಕೆ.ಎಸ್. ಈಶ್ವರಪ್ಪ (ನೀರಾವರಿ ಸಚಿವರು): ಸರ್, ಇದು ಇಡೀ ದೇಶದಲ್ಲಿಲ್ಲ ಈ ರೀತಿ ಮಾಡುವುದು.

ಶ್ರೀ ಸಿ. ಚನ್ನಿಗಪ್ಪ (ಅರಣ್ಯ ಸಚಿವರು): ಸರ್ ನಾವು ಅವರನ್ನು ರಿಕ್ವೆಸ್ಟ್ ಮಾಡಿಕೊಳ್ಳುತ್ತೇವೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಅವರು ಕೇಳುವಂತಹ ಪ್ರತಿಯೊಂದು ಪ್ರಶ್ನೆಗೂ ನಾವು ಉತ್ತರಿಸಲಿಕ್ಕೆ ಸಿದ್ಧರಿದ್ದೇವೆ. ಆದರೆ ಬಾವಿಗೆ ಇಳಿದು ನಿಮ್ಮ ರೂಲಿಂಗ್ ಅನ್ನು ಪ್ರಶ್ನೆ ಮಾಡುವುದು ಸರಿಯೇ? ಇದು ಯಾವ ಸಂಪ್ರದಾಯ ಸ್ವಾಮಿ? ಇವರ ನಡವಳಿಕೆ ಎಷ್ಟರ ಮಟ್ಟಿಗೆ ಶೋಭೆ ತರುವಂತಹದು?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ಈ ರೀತಿ ಆಡಳಿತ ನಡೆಸುತ್ತಿರುವ ರಾಜ್ಯಗಳಲ್ಲಿ ಯಾರಾದರೂ ಈ ರೀತಿ ಸ್ಪೀಕರ್‌ರವರ ರೂಲಿಂಗ್ ಅನ್ನು ಪ್ರಶ್ನೆ ಮಾಡಿ ವಿರೋಧ ಪಕ್ಷದವರು ಧರಣಿ ಮಾಡುವಂಥ ಪರಿಸ್ಥಿತಿ ದೇಶದಲ್ಲಿ ಎಲ್ಲಿಯೂ ಇಲ್ಲ. ಸಭಾಧ್ಯಕ್ಷರ ರೂಲಿಂಗ್ ಅನ್ನೇ ಪ್ರಶ್ನೆ ಮಾಡಿ ಈ ರೀತಿ ಧರಣಿ ಮಾಡುತ್ತಿರುವುದು ಒಳ್ಳೆಯದಲ್ಲ. ದಯವಿಟ್ಟು ತಾವೆಲ್ಲ ರೂಲಿಂಗ್‌ಗೆ ಗೌರವ ಕೊಟ್ಟು ವಾಪಸ್ಸು ಹೋಗಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ): ಕೇಂದ್ರದಲ್ಲಿ ಏನಾಯಿತು, ರಾಜ್ಯದಲ್ಲಿ ಏನಾಯಿತು, ಇದನ್ನೆಲ್ಲಾ ನೋಡಿಯಾಯಿತು, ಸ್ಪೀಕರ್ ಅವರೆದುರು ಅಲ್ಲಿಯೂ ಧರಣಿ ಮಾಡಿದ್ದಾಯಿತು, ಇಲ್ಲಿಯೂ ಧರಣಿ ಮಾಡಿಯಾಯಿತು. ಆದ್ದರಿಂದ ಪುನಃ ಅದರ ಬಗ್ಗೆ ಚರ್ಚೆ ಮಾಡುವುದಕ್ಕಿಂತ ಬದಲು ಸದನವನ್ನು ಸ್ವಲ್ಪ ಕಾಲ ಮುಂದೂಡಿ ನಾಯಕರುಗಳನ್ನು ಕರೆಸಿ ಅವರೊಂದಿಗೆ ಚರ್ಚೆ ಮಾಡಿ, ಏನು ಫಲಿತಾಂಶ ಬರುತ್ತದೆ ಎಂದು ನೋಡೋಣ.

ಶ್ರೀ ಎನ್. ಧರಂಸಿಂಗ್: ಈಗ ಅಡ್ಜರ್ನ್‌ಮೆಂಟ್ ಮೋಷನ್ ಅನ್ನು ಮೂವ್ ಮಾಡಿದ್ದೇನೆ. ತಮ್ಮ ಎಲ್ಲಾ ನಾಯಕರುಗಳು ಮಾತನಾಡಿದ್ದಾರೆ. ನಾವು ಗುರುತರವಾದಂಥ ಆಪಾದನೆಯನ್ನು ಮಾನ್ಯ ಮುಖ್ಯಮಂತ್ರಿಗಳವರ ಮೇಲೆ

ಮಾಡಿದ್ದೇವೆ. ಈಗಾಗಲೇ ಉಪ ಮುಖ್ಯಮಂತ್ರಿಗಳವರು ಹೇಳಿದ್ದಾರೆ. ಎಷ್ಟೋ ಸಲ ಈ ರೀತಿ ನಿಲುವಳಿ ಸೂಚನೆ ಬಂದರೆ ಸಭಾಧ್ಯಕ್ಷರು ಅದರ ಬಗ್ಗೆ ಬೇರೆ ರೂಪದಲ್ಲಿ ಚರ್ಚೆ ಮಾಡಲಿಕ್ಕೆ ಅವಕಾಶ ಕೊಟ್ಟಿದ್ದು ಇದೆ. ಆದರೆ ಇಲ್ಲಿ ನೇರವಾಗಿ ಏನು ಮುಖ್ಯಮಂತ್ರಿಗಳು ಇವತ್ತು ಆಪಾದನೆ ಮಾಡಿದ್ದಾರೆ, ಅದರ ಬಗ್ಗೆ ನಾವು ಇವತ್ತು ಅವರನ್ನು ರಾಜೀನಾಮೆ ಕೊಡಬೇಕೆಂದು ಕೇಳುತ್ತಿದ್ದೇವೆ. ಇವತ್ತು ಅವರು ಅಕ್ಯೂಸ್ಡ್ ಪರಿಸ್ಥಿತಿಯಲ್ಲಿದ್ದಾರೆ. ಅವರ ಮೇಲೆ ಆಪಾದನೆ ಮಾಡುತ್ತಿದ್ದೇವೆ. ಖರ್ಗೆಯವರು, ರಮೇಶ್‌ಕುಮಾರ್‌ರವರು ಮತ್ತು ದೇಶಪಾಂಡೆಯವರು ಸ್ಪಷ್ಟವಾಗಿ ಈ ಬಗ್ಗೆ ಇವತ್ತು ಹೇಳಿದ್ದಾರೆ. ಇವತ್ತು ಪದೇ ಪದೇ ಮಾತುಕತೆ ಆಡುವುದರಲ್ಲಿ ಅರ್ಥವಿಲ್ಲ. ನಾವು ಈ ತರಹದ ಧರಣಿಯನ್ನು ಇವತ್ತು ನಿಮ್ಮ ವಿರುದ್ಧ ಮಾಡುತ್ತಿಲ್ಲ, ಸರ್ಕಾರದ ಧೋರಣೆ ಏನಿದೆ, ಮುಖ್ಯಮಂತ್ರಿಗಳ ವಿರುದ್ಧ ನಮ್ಮ ಸ್ಯಾಂಡ್ ಏನಿದೆ ಇದನ್ನು ಮುಂದುವರೆಸಿಕೊಂಡು ಹೋಗುತ್ತೇವೆ. ಇದಕ್ಕೆ ಬೇರೆ ತರಹ ವಿಚಾರಗಳನ್ನು ಪ್ರಸ್ತಾಪ ಮಾಡಲಿಕ್ಕೆ ನಾವು ಸಿದ್ಧರಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು): ಈ ಸದನದಲ್ಲಿ ನಾವೇ ಮಾಡಿದಂತಹ ರೂಲ್ಸ್ ಅಂಡ್ ರೆಗ್ಯುಲೇಷನ್‌ಗಳನ್ನು ಇವತ್ತು ಫಾಲೋ ಮಾಡಲಿಕ್ಕಾಗುತ್ತಿಲ್ಲ. ನಿಮ್ಮ ರೂಲಿಂಗ್‌ನ್ನು ಇವರು ಗೌರವಿಸದೇ ಇರುವುದು ಸರಿಯಲ್ಲ, ಇವರು ಸರ್ವಾಧಿಕಾರಿಗಳಂತೆ ಹೇಳುವುದನ್ನೆಲ್ಲ ನಾವು ಕೇಳಿಕೊಂಡು ಇರಬೇಕು. ಇವರು ಕೇಳಿದಾಗ ನಾವು ರಾಜೀನಾಮೆ ಕೊಟ್ಟು ಹೋಗಬೇಕು. ಹೀಗಾದರೆ ಹೇಗೆ? ನಿಮಗೆ ಅನುಭವವಿದೆ, ನೀವು ಚರ್ಚೆ ಮಾಡಿ ಸ್ವಾಮಿ, ನಿಮ್ಮೊಂದಿಗೆ ನಾವು ನಿಂತುಕೊಳ್ಳುತ್ತೇವೆ. ಸ್ಪೀಕರ್ ರೂಲಿಂಗ್ ಕೊಟ್ಟಾಗಿದೆ, ರೂಲ್ 69ಕ್ಕೆ ಕನ್ವರ್ಟ್ ಮಾಡಲಾಗಿದೆ. ಚರ್ಚೆಯಲ್ಲಿ ಪಾಲ್ಗೊಳ್ಳೋಣ ಎಂದು ಹೇಳಿದರೆ ಇಲ್ಲ, ನಮಗೆ ಹೀಗೆ ಆಗಬೇಕೆಂದು, ನಿಮಗೆ ಡೈರೆಕ್ಷನ್ಸ್ ಕೊಡುತ್ತಾರೆಂದರೆ, ಅದು ಸರಿಯಲ್ಲ ಹಿಂದೆ ಯಾರಾದರೂ ಪ್ರತಿಪಕ್ಷದಲ್ಲಿ ಕುಳಿತುಕೊಂಡು ನಿಮಗೆ ಹೀಗೆ ಪ್ರಶ್ನೆ ಮಾಡಿದ್ದಾರೇನು? ಅಥವಾ ನಿಮ್ಮ ರೂಲಿಂಗ್ ಅನ್ನು ಪುನರ್‌ಪರಿಶೀಲನೆ ಮಾಡಿ ಎಂದು ಕೇಳಿ, ನಿಮ್ಮ ಫೈನಲ್ ಡಿಸಿಷನ್‌ಗಾದರೂ ಅವಕಾಶ ಮಾಡಿಕೊಡಬೇಕಲ್ಲವೇ? ದಯಮಾಡಿ ಒಳಗಡೆಯಾದರೂ ಬನ್ನಿ. ಸ್ಪೀಕರ್‌ರವರ ಕೊಠಡಿಯಲ್ಲಿ ಕುಳಿತುಕೊಂಡು ಮಾತನಾಡೋಣ, ಇಲ್ಲವೇ ನಿಮ್ಮ ಚೇರ್‌ಗೆ ಬನ್ನಿ. ನೀವು 69 ರೂಲ್‌ಗೆ ಕನ್ವರ್ಟ್ ಮಾಡಿದ ಮೇಲೆ ಅದನ್ನು ಮರುಪರಿಶೀಲನೆ ಮಾಡಬೇಕೆಂದು ನೀವು ಅವರಲ್ಲಿ ವಿನಂತಿ ಮಾಡಿ. ಪ್ರಮುಖವಾದಂಥ ವಿಷಯಗಳನ್ನು ನಾವು ಚರ್ಚೆ ಮಾಡುವ ಕಾಲದಲ್ಲಿ ಈ ಕಾರಣಕ್ಕೋಸ್ಕರ ನೀವು ವೆಲ್‌ನಲ್ಲಿ ಕುಳಿತು ಸದನದ ಸಮಯವನ್ನು ಹಾಳು ಮಾಡುವುದು ಎಷ್ಟರ ಮಟ್ಟಿಗೆ ಸರಿ ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೇ, ಸದನ ಸುಸೂತ್ರವಾಗಿ ನಡೆಯಬೇಕಾಗಿದೆ. ಪ್ರಮುಖವಾದಂಥ ವಿರೋಧಪಕ್ಷದವರು

ಧರಣಿ ಕುಳಿತಿದ್ದಾರೆ. ರಾಜ್ಯದಲ್ಲಿರುವ ಹಲವಾರು ಗಂಭೀರವಾದ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕಾಗಿದೆ. ದಯವಿಟ್ಟು ಎಲ್ಲಾ ವಿರೋಧಪಕ್ಷದ ಮುಖಂಡರನ್ನು, ಕಾಂಗ್ರೆಸ್ ಪಕ್ಷದ ಮುಖಂಡರನ್ನು ಕರೆದು ಸಂಧಾನ ಮಾಡಿ ಸದನ ನಡೆಸಲಿಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಇಂತಹ ಘಟನೆಗಳು ಸಾಕಷ್ಟು ನಡೆದಿದೆ. ಮಾನ್ಯ ಧರಂಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದಾಗಲೂ ಯಾವಾಗಲೂ ಕರೆದು ಎಷ್ಟೋ ಬಾರಿ ಸಮಾಧಾನದಿಂದ ರಾಜಿ ಮಾಡಿದ್ದಾರೆ. ನಾವೆಲ್ಲಾ ಅದರಲ್ಲಿ ಭಾಗವಹಿಸಿದ್ದೇವೆ. ಯಡಿಯೂರಪ್ಪನವರು ನಾಯಕರಾಗಿದ್ದಾಗಲೂ ಎಷ್ಟೋ ಬಾರಿ ಇಂತಹ ಘಟನೆಗಳು ನಡೆದಿವೆ. ಎಲ್ಲರ ಕಾಲದಲ್ಲಿಯೂ ಇದು ನಡೆಯುತ್ತಲೇ ಇರುತ್ತದೆ, ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಇಂಥ ಪ್ರತಿಭಟನೆಗಳನ್ನು ಮಾಡುವ ಹಕ್ಕು ಇದೆ. ಅದನ್ನು ಯಾರೂ ಕಿತ್ತುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದರೆ ದಯವಿಟ್ಟು ತಾವು ಸದನವನ್ನು ಸ್ವಲ್ಪ ಕಾಲ ಮುಂದೂಡಿ, ತಮ್ಮ ಚೇಂಬರ್‌ಗೆ ಎಲ್ಲಾ ಪಕ್ಷದ ಮುಖಂಡರುಗಳನ್ನು ಕರೆದು ಸರ್ಕಾರದ ಮುಖಾಂತರ ಮಾತುಕತೆ ಮಾಡಿ ಏನಾದರೂ ಒಂದು ಪರಿಹಾರವನ್ನು ಮಾಡಬೇಕು. ಜನ ನಮ್ಮಿಂದ ಬಹಳಷ್ಟು ನಿರೀಕ್ಷೆ ಮಾಡುತ್ತಿದ್ದಾರೆ, ಬೇರೆ ಬೇರೆ ಸಮಸ್ಯೆಗಳಿವೆ, ಇವತ್ತು ಬಸ್ ಪ್ರಯಾಣ ದರ ಬೆಲೆ ಏರಿಕೆಯಾಗಿದೆ, ಮಳೆ ಹೆಚ್ಚಾಗಿ ಜನ ಸಾವಿಗೀಡಾಗಿದ್ದಾರೆ. ಇಂತಹ ಅನೇಕ ಗಂಭೀರ ಸಮಸ್ಯೆಗಳಿವೆ ಅವುಗಳ ಬಗ್ಗೆ ನಾವು ಚರ್ಚೆ ಮಾಡಬೇಕಾಗಿದೆ. ಜನಗಳು ನಮ್ಮಿಂದ ಅದನ್ನು ನಿರೀಕ್ಷೆ ಮಾಡುತ್ತಿದ್ದಾರೆ, ದಯವಿಟ್ಟು ಅವರೆಲ್ಲರನ್ನೂ ಕರೆದು ಸಮಾಧಾನ ಮಾಡಿ ಪರಿಹಾರವನ್ನು ಹುಡುಕಬೇಕೆಂದು ನಾನು ಹೇಳಲಿಚ್ಛಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ನೋಡಿ, ಧರಂಸಿಂಗ್‌ರವರಿಗೆ ಸಮಾಧಾನವಿಲ್ಲ, ಅವರ ಆತ್ಮಸಾಕ್ಷಿಗೆ ವಿರುದ್ಧವಾಗಿ ಅವರನ್ನು ಇವರೆಲ್ಲಾ ಏತಕ್ಕೆ ಇಕ್ಕಟ್ಟಿಗೆ ಸಿಲುಕಿಸುತ್ತಿದ್ದಾರೆಂದು ಅನ್ನಿಸುತ್ತಿದೆ. ಅದಕ್ಕೆ ಅವರು ತಮ್ಮ ಸ್ಥಾನಕ್ಕೆ ವಾಪಸ್ಸು ಹೋಗುತ್ತಿದ್ದಾರೆ.

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್.): ಯಾರ ಯಾರ ಆತ್ಮ ಕ್ಲೀನಾಗಿದೆ, ಯಾರ ಯಾರ ಆತ್ಮ ಶಕ್ತಿಯಾಗಿದೆ ಎಂದು ಅಲ್ಲಿ ಹೋಗಿ ಕೇಳೋಣ. ಆ ಕಡೆಯಲ್ಲಿ ನೀವು ಕ್ಲೀನ್ ಮಾಡಿ. ಇಬ್ಬರ ಆತ್ಮಗಳನ್ನು ಸರ್ಫ್ ಹಾಕಿ ಕ್ಲೀನ್ ಮಾಡಿ. ಒಳ್ಳೆಯದನ್ನು ತೆಗೆದುಕೊಂಡು ಬರೋಣ. ಅದಕ್ಕೆ ನಾವು ಅವಕಾಶ ಮಾಡಿಕೊಡುತ್ತೇವೆ. ಹತ್ತು ನಿಮಿಷ ಸಭೆಯನ್ನು ಮುಂದೂಡಿ. ಸಾಹೇಬರು ಇದ್ದಾರೋ, ದೊಡ್ಡವರು ಇದ್ದಾರೋ, ಅವರು ಏನು ಡಿಮ್ಯಾಂಡ್ ಮಾಡಿದ್ದಾರೆ. ಅದು ಹಾಗೆಯೇ ಇರಲಿ. ಅದನ್ನು ವಾಪಸ್ ತೆಗೆದುಕೊಳ್ಳಿ ಎಂದು ಹೇಳಲಿಲ್ಲ. ಆದರೆ, ನಾವು ಅಲ್ಲಿಗೆ ಹೋಗಿ ಮಾತುಕತೆ ಮಾಡಿ ಮತ್ತೆ ಬರೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಅಧ್ಯಕ್ಷರೇ, ನಾವು ನಿಮ್ಮ ರೂಲಿಂಗ್ ವಿರುದ್ಧ ಹಠ ಹಿಡಿದು ಇಲ್ಲಿ ಕುಳಿತಿಲ್ಲ. ನಾವು ನಿಲುವಳಿ ಸೂಚನೆ ಮೇಲೆ

ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ. ಅದನ್ನು ನೀವು ಕನ್‌ವರ್ಟ್ ಮಾಡುವುದಕ್ಕಿಂತಲೂ ನಿಲುವಳಿ ಸೂಚನೆಯೇ ಇರಲಿ ಎಂದು ಪದೇ ಪದೇ ವಿನಂತಿ ಮಾಡಿಕೊಂಡಿದ್ದೇವೆ. ಇನ್ನೂ ವಿನಂತಿ ಮಾಡಿಕೊಳ್ಳುತ್ತಾ ಇದ್ದೇವೆ. ನಿಮ್ಮ ರೂಲಿಂಗ್ ಧಿಕ್ಕರಿಸಬೇಕು ಎಂಬತಕ್ಕಂಥ ಭಾವನೆ ನಮಗೆ ಇಲ್ಲ. ಆದರೆ ನಮ್ಮ ಮನವಿ ಏನೆಂದರೆ, ಈ ಸದನದ ಸದಸ್ಯರ ಗೌರವವನ್ನು ಎತ್ತಿ ಹಿಡಿಯಬೇಕು ಮತ್ತು ಪ್ರಜಾಪ್ರಭುತ್ವದಲ್ಲಿ ಜರ್ನಲಿಸ್ಟ್ ಎಷ್ಟು ಇಂಪಾರ್ಟೆಂಟ್, ಅಷ್ಟೇ ಒಬ್ಬ ಶಾಸಕ, ಮಾಜಿ ಮಂತ್ರಿಯೂ ಇಂಪಾರ್ಟೆಂಟೇ ಮತ್ತು ಇತರೆ ಬಿ.ಜೆ.ಪಿ. ಸದಸ್ಯರು ಫಾರ್ ಅದರ್ ಕನ್‌ಸಿಡರೇಷನ್‌ಗೆ ಏನು ಈಲ್ಡ್ ಆಗಿದ್ದಾರೋ ಅವರ ಗೌರವದ ಪ್ರಶ್ನೆಯೂ ಇದೆ. ಅದಕ್ಕೆ, ನಾವು ಯಡಿಯೂರಪ್ಪನವರು ಮತ್ತು ಅವರ ಸದಸ್ಯರ ಗೌರವಕ್ಕಾಗಿ ಇದನ್ನು ಮಾಡುತ್ತಾ ಇದ್ದೇವೆಯೇ ಹೊರತಾಗಿ ಬೇರೆಯವರ ಗೌರವಕ್ಕೆ ಅಲ್ಲ. ನಿಜವಾಗಿ ನೋಡಿದರೆ, ಅವರು ಧರಣಿ ಕೂಡಬೇಕಾಗಿತ್ತು. ಏಕೆಂದರೆ, ಬಿ.ಜೆ.ಪಿ. ಸದಸ್ಯರಿಗೆ ಅವಮಾನವಾಗಿದೆ, ಅದು ಏನು ಅದರ್ ಕನ್‌ಸಿಡರೇಷನ್‌ಗೆ ನಮಗೆ ನೀವು ಹೇಳಿದ್ದೀರಿ ಯಾವ ಕನ್‌ಸಿಡರೇಷನ್ ಮೇಲೆ ನಾವು ಬಿಲ್ಲಿಗೆ ಅಪೋಸ್ ಮಾಡಿದ್ದೇವೆ, ಅದನ್ನು ಬಹಿರಂಗಪಡಿಸಿ ಎಂದು ಅವರು ಹೇಳುವುದು ಬಿಟ್ಟು ನಮ್ಮ ಬಾಯಿಯಿಂದ ಹೇಳಿಸುತ್ತಿದ್ದಾರೆ, ನಾವು ಪ್ರೊಟೆಕ್ಟ್ ಮಾಡುತ್ತಿದ್ದರೂ ಅವರು ಸ್ವೀಕಾರ ಮಾಡುವುದಕ್ಕೆ ತಯಾರಿಲ್ಲ ಎಂದರೆ, ನಾವು ಏನು ಮಾಡಬೇಕು. ಇದರ ಬಗ್ಗೆ ಅಧ್ಯಕ್ಷರಾದ ತಾವೇ ಹೇಳಿ.

ಶ್ರೀ ಕೆ.ಎಸ್. ಈಶ್ವರಪ್ಪ: ನಿಯಮ 69ರ ಪ್ರಕಾರ ತಾವು ಬದಲಾವಣೆ ಮಾಡಿದ್ದೀರಿ. ಚರ್ಚೆ ಮಾಡುವುದಕ್ಕೆ ಪೂರ್ಣ ಅವಕಾಶ ಇದೆ. 69ರ ನಿಯಮದ ಪ್ರಕಾರ ಅವರು ಏನೇನು ಹೇಳಬೇಕೆಂದು ಇದ್ದಾರೋ ಪೂರ್ಣವಾಗಿ ಹೇಳಲಿ. ಅದಾದ ನಂತರ ಮುಂದಿನದೇನು ಎಂಬುದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದು ಬಿಟ್ಟು, ಚರ್ಚೆ ಮಾಡುವುದಕ್ಕೆ ಇವರು ತಯಾರಿಲ್ಲದೆ ಇದ್ದರೆ ಹೇಗೆ? ವಿರೋಧ ಪಕ್ಷ ಇರುವುದು ಚರ್ಚೆ ಮಾಡುವುದಕ್ಕೆ, ಆಡಳಿತ ಪಕ್ಷದವರನ್ನು ಇಕ್ಕಟ್ಟಿಗೆ ಸಿಕ್ಕಿಸಬೇಕಾದರೆ, ಚರ್ಚೆ ಮಾಡಬೇಕು. ಆದರೆ, ಸೀದಾ ಧರಣಿಗೆ ಬಂದು, ನಿಮ್ಮ ರೂಲಿಂಗನ್ನೇ ಪ್ರಶ್ನೆ ಮಾಡಿಕೊಂಡು ಧರಣಿಗೆ ಕುಳಿತುಕೊಳ್ಳುತ್ತಿರುವುದು ದೇಶದ ಇತಿಹಾಸದಲ್ಲಿ ಇದು ಮೊದಲನೇ ಬಾರಿ. ಅವರು ತಮ್ಮ ರೂಲಿಂಗ್ ಪ್ರಶ್ನೆ ಮಾಡುತ್ತಿದ್ದಾರೆ. ಇದು ಬೇರೆ ಇನ್ನೇನೂ ಇಲ್ಲ.

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಎಲ್ಲಾ ಮಾನ್ಯ ಸದಸ್ಯರುಗಳಲ್ಲಿ ನಾನು ಮನವಿ ಮಾಡುತ್ತೇನೆ. ದಯಮಾಡಿ, ನಾನು ಈ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ರೂಲಿಂಗ್ ಕೊಟ್ಟಿದ್ದೇನೆ. ತಾವು ಹೇಳಬೇಕಾದುದೆಲ್ಲವನ್ನೂ ಹೇಳುವುದಕ್ಕೆ ಅವಕಾಶ ಇದೆ. ನೀವು ಮಧ್ಯದಲ್ಲಿ ಮಾತನಾಡುವಾಗ, ಸಭಾ ನಾಯಕರು ಎದ್ದು ನಿಂತು ಹೇಳಿದ್ದಾರೆ. ಆ ಕಾರಣದಿಂದ

ಅವರು ಏನು ಹೇಳಬೇಕೋ ಅದನ್ನೆಲ್ಲಾ ಹೇಳಲಿ. ಅವರ ಬಗ್ಗೆ ಏನು ಹೇಳಬೇಕೋ ಹೇಳಲಿ. ವಿವರವಾಗಿ, ಪೂರ್ಣವಾಗಿ ಹೇಳಿ. ಆದರೆ, ಸದನದ ಕಾರ್ಯಕಲಾಪಗಳು ನಡೆಯುವುದಕ್ಕೆ ದಯಮಾಡಿ ಅವಕಾಶ ಮಾಡಿಕೊಡಿ ಎಂದು ನಾನು ಮತ್ತೊಮ್ಮೆ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್: ಸನ್ಮಾನ್ಯ ಅಧ್ಯಕ್ಷರೇ, ಹಾಗಾದರೆ ಈ ನಿಲುವಳಿ ಸೂಚನೆಯ ನಿಯಮ ಬೇಕೇ? ನಾನೂ ಕೂಡ 8–10 ವರ್ಷದಿಂದ ನೋಡುತ್ತಾ ಇದ್ದೇವೆ. ಈ ಕಡೆ ಇದ್ದಾಗ, ಅವರು ಅದನ್ನೇ ಮಾಡುತ್ತಾರೆ ಮತ್ತು ಆ ಕಡೆ ಹೋದಾಗ ಇದನ್ನೇ ಮಾಡುತ್ತಾರೆ. ಆದ್ದರಿಂದ ಈ ನಿಯಮವನ್ನೇ ತೆಗೆದುಬಿಡಿ. ಹಾಗಾದರೆ, ಯಾವ ವೇಳೆಯಲ್ಲಿ ನಿಲುವಳಿ ಸೂಚನೆಯನ್ನು ಕೊಡಬೇಕು. ಎಂತಹ ಪರಿಸ್ಥಿತಿಯಲ್ಲಿ ಇದನ್ನು ಕೊಡಬೇಕೆಂಬ ಬಗ್ಗೆ ತಾವು ಸೂಚನೆಯನ್ನು ಕೊಡಬೇಕು.

ಅಧ್ಯಕ್ಷರು: ಮಾನ್ಯ ಪಾಟೀಲರೇ, ಬೇಕಾದಷ್ಟು ರೂಲಿಂಗ್ಸ್ ಇದೆ. ಎಲ್ಲಾ ರೂಲಿಂಗ್ಸ್ ಕೊಟ್ಟಿದ್ದಾರೆ.

ಶ್ರೀ ಎಸ್.ಎಸ್.ಪಾಟೀಲ್: ನಾವು ನೋಡಿರುವುದು, ಯಾವುದಕ್ಕೂ ಈ ನಿಯಮದ ಕೆಳಗೆ ಚರ್ಚೆಗೆ ಅವಕಾಶ ಕೊಡುವುದೇ ಇಲ್ಲ, ಯಾವಾಗಲಾದರೂ ಇದಕ್ಕೆ ಅವಕಾಶ ಕೊಟ್ಟಿರುವ ಉದಾಹರಣೆ ಕಾಣುತ್ತಾ ಇಲ್ಲ.

ಅಧ್ಯಕ್ಷರು: ನೀವು ಕೊಟ್ಟಿರುವುದು ಏನಾಗಿದೆ ಎಂದರೆ, ಯಾವುದೋ ಪತ್ರಿಕೆಗೆ ಹೇಳಿಕೆ ನೀಡಿದ್ದಾರೆ. ಈ ಪತ್ರಿಕೆ ರಿಪೋರ್ಟ್ ಮೇಲೆ ನೀವು ತಂದಿರತಕ್ಕಂಥಾದ್ದು.

ಶ್ರೀ ಎಸ್.ಎಸ್. ಪಾಟೀಲ್: ನಾವು ಹೇಳಿಯೇ ಇಲ್ಲವೆಂದಿದ್ದರೆ, ಈ ಪ್ರಶ್ನೆಯೇ ಬರುತ್ತಾ ಇರಲಿಲ್ಲ.

ಅಧ್ಯಕ್ಷರು: ಅದು ಆಗುವುದಿಲ್ಲವೆಂದು ಇದೆ. ಅದನ್ನೆಲ್ಲಾ ನೋಡಿಯೇ ನಾನು ಕೊಟ್ಟಿರುವುದು. ಅದಕ್ಕೋಸ್ಕರವೇ ನಾನು ನೇರವಾಗಿ ರಿಜೆಕ್ಟ್ ಮಾಡಿಲ್ಲ. ಗಂಭೀರವಾಗಿದೆ, ಚರ್ಚೆಯಾಗಲಿ ಎಂದು ನಾನು ನಿಯಮ 69ರ ಕೆಳಗಡೆ ಅವಕಾಶ ಮಾಡಿಕೊಟ್ಟಿದ್ದೇನೆ. ಆದ್ದರಿಂದ ದಯವಮಾಡಿ, ಸದನದ ಕಾರ್ಯಕಲಾಪಗಳು ನಡೆಯುವುದಕ್ಕೆ ತಾವು ಸಹಕಾರ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್: ತಮ್ಮ ವಿರುದ್ಧ ನಮ್ಮದು ಏನೂ ಇಲ್ಲ. ತಮ್ಮ ವಿರುದ್ಧ ನಮ್ಮ ಅಸಹಕಾರ ಏನೂ ಇಲ್ಲ. ಅವರು ಏಕೆ ಬೇಡ ಎಂದು ತಕರಾರು ಮಾಡುತ್ತಾರೆ? ನಿಲುವಳಿ ಸೂಚನೆ ನಾವು ಮಾತನಾಡಿದರೆ ಏನು ತಪ್ಪಾಗುತ್ತದೆ? ನಿಯಮ 69ರ ಮೇಲೆ ಮಾತನಾಡಿದರೆ ಏನು ತರ್ಕವಾಗುತ್ತದೆ ಎಂಬುದರ ಬಗ್ಗೆಯಾದರೂ ಒಂದು ರೂಲಿಂಗ್ ಕೊಡಿ. ಇದು ಬಹಳ ಗಂಭೀರವಾದ ವಿಚಾರವಾಗಿರುವುದರಿಂದ ದಯವಿಟ್ಟು ತಾವು ನಿಲುವಳಿ ಸೂಚನೆಗೆ

ಅವಕಾಶ ಮಾಡಿಕೊಡಿ. ಇಲ್ಲವಾದರೆ, ಈ ನಿಯಮಕ್ಕೆ ತಿದ್ದುಪಡಿಯನ್ನಾದರೂ ತಂದುಬಿಡಿ ಇದು ಇರುವುದೇ ಬೇಡ.

ಅಧ್ಯಕ್ಷರು: ಬಹಳ ದಿವಸದಿಂದ ಈ ನಿಯಮ ಇದೆ. ಎಷ್ಟು ಪ್ರಕರಣಗಳಲ್ಲಿ 69ರ ಕೆಳಗಡೆ ಚರ್ಚೆಯಾಗಿದೆ ಅಥವಾ ನೇರವಾಗಿ ನಿಲುವಳಿ ಸೂಚನೆ ಮೇಲೆ ಚರ್ಚೆಯಾಗಿದೆ ಎಂಬುದು ತಮಗೂ ಗೊತ್ತಿದೆ. ತಾವು ಬಹಳ ವರ್ಷದಿಂದ ಈ ಸದನದಲ್ಲಿ ಸದಸ್ಯರಿದ್ದೀರಿ. ಆದರೆ, ಯಾವುದೇ ವಿಚಾರಗಳಲ್ಲಿ ಇರಲಿ. ಇದು ಪತ್ರಿಕಾ ವರದಿಯ ಮೇಲೆ ತಂದಿರತಕ್ಕಂಥಾದ್ದು ಅದು ನಿಲುವಳಿ ಸೂಚನೆ ವ್ಯಾಪ್ತಿಗೆ ಬರುವುದಿಲ್ಲವೆಂದು ನಾನು ನಿಯಮ 69ರ ಕೆಳಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇನೆ. ನೀವು ಹೇಳುವುದೆಲ್ಲಾ ಹೇಳಿ. ದಯಮಾಡಿ ಸಹಕರಿಸಬೆಕು. ಎಷ್ಟು ಬೇಕಾದರೂ ಅವಕಾಶ ಕೊಡುವುದಕ್ಕೆ ಸಿದ್ದನಿದ್ದೇನೆ.

ಶ್ರೀ ಬಸವರಾಜ ರಾಯರೆಡ್ಡಿ: ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇನ್ನಿತರ ಸದಸ್ಯರುಗಳು ಈ ವಿಚಾರದಲ್ಲಿ ನಿಲುವಳಿ ಸೂಚನೆ ತರಬೇಕೆಂದು ತಮಗೆ ಮನವಿ ಮಾಡಿದ್ದೇವೆ. ತಾವು ಈ ವಿಚಾರವನ್ನು ನಿಯಮ 69ರ ಪ್ರಕಾರ ಕನ್‌ವರ್ಟ್ ಮಾಡಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಆದರೆ, ದಯಮಾಡಿ ನಾವು ತಮಗೆ ಇಷ್ಟೇ ಕೇಳುತ್ತೇವೆ. ನೀವು ರೂಲಿಂಗ್ ಕೊಟ್ಟಿದ್ದೀರಿ, ನಿಮ್ಮ ರೂಲಿಂಗ್‌ನ್ನು ನಾವು ಪ್ರಶ್ನೆ ಮಾಡುತ್ತಾ ಇಲ್ಲ. ಆದರೆ, ಮಾನ್ಯ ಎಸ್.ಎಸ್. ಪಾಟೀಲರು ಹೇಳಿದ ಹಾಗೆ ಏನು ಪ್ರಯೋಜನ, ನಮ್ಮ ವಿರೋಧ ಪಕ್ಷದ ನಾಯಕರಿಗೆ ಮತ್ತು ಸದಸ್ಯರಿಗೆ ಏನು ಬೆಲೆ ಇದೆ. ನಿಮಗೆ ತಿಳಿದ ಹಾಗೆ ಮಾಡಿದರೆ, ಅದು ಸರಿಯೇ, ತಾವು ವಿಚಾರ ಮಾಡಿ. ನೋಡಿ ಇದಕ್ಕೇನು ವ್ಯತ್ಯಾಸ ಇದೆ. ನಿಯಮ 60ರಲ್ಲಿ ಸಾರ್ವಜನಿಕ ಮಹತ್ವವುಳ್ಳ ವಿಷಯದ ಮೇಲೆ ನಿಲುವಳಿ ಸೂಚನೆ. ನಿಲುವಳಿ ಸೂಚನೆಯನ್ನು ಏಕೆ ತರುತ್ತಾರೆ? ಇದು ಅತ್ಯಂತ ಮಹತ್ವದ ವಿಚಾರವಾದುದರಿಂದ ಸರ್ಕಾರದ ಮೇಲೆ ಅದರಲ್ಲಿ ಮುಖ್ಯಮಂತ್ರಿಗಳು ಬಹಳ ವಿವಾದಾತ್ಮಕವಾದಂಥ ಹೇಳಿಕೆಯನ್ನು ಕೊಟ್ಟಿದ್ದಾರೆ ಮತ್ತು ಅದು ಬಹಳ ದೊಡ್ಡ ಅಪರಾಧ ಆಗುತ್ತದೆ. ಆದ್ದರಿಂದ, ಎಲ್ಲಾ ವಿಚಾರಗಳನ್ನು ಸ್ಥಗಿತಗೊಳಿಸಿ, ಅದರ ಬಗ್ಗೆ ಸಂಪೂರ್ಣವಾದಂಥ ಚರ್ಚೆಯಾಗಬೇಕು. ಅದಕ್ಕಾಗಿ ನಿಲುವಳಿ ಸೂಚನೆ ನಿಯಮ ಇರುವುದು. ನಿಯಮ 69ರಲ್ಲಿ ಕೊಟ್ಟರೆ ಏನಾಗುತ್ತದೆ, ನಿಯಮ 69ಕ್ಕೆ ಈಗ ತಾವೇನು ಕೊಟ್ಟಿದ್ದೀರಿ, ಇದಕ್ಕೆ ಯಾರೇ ಒಬ್ಬರು ಕೊಟ್ಟರೂ ಮಾಡಬಹುದು. ಮತ್ತೆ ಬೇರೆ ಯಾರು ಬೇಕಾದರೂ ಭಾಗವಹಿಸುವುದಕ್ಕೆ ಅವಕಾಶ ಇದೆ. ಹೀಗಾಗಿ, ಅದಕ್ಕೆ ಬಹಳ ಮಹತ್ವ ಬರುವುದಿಲ್ಲ. ಆ ಮಹತ್ವ ಬರದೇ ಇರುವುದರಿಂದ, ಇದಕ್ಕೊಂದು ಇಂಪಾರ್ಟೆನ್ಸ್ ಸಿಗಬೇಕು ಮತ್ತು ಸದನದಲ್ಲಿ ಅದಕ್ಕೊಂದು ಸ್ಯಾಂಕ್ಟಿಟಿ ಇರುತ್ತದೆ. ಅದಕ್ಕಾಗಿ, ತಾವು ಇದನ್ನು ಪ್ರತಿಷ್ಠೆಗೆ ತೆಗೆದುಕೊಳ್ಳಬೇಡಿ. ದಯಮಾಡಿ ತಮಗೆ ಮನವಿ ಮಾಡುತ್ತೇವೆ. ಏನು

ವಿರೋಧ ಪಕ್ಷದ ನಾಯಕರು ಮತ್ತು ಇನ್ನಿತರ ಸದಸ್ಯರು ಕೊಟ್ಟಿದ್ದಾರೆ, ಅದನ್ನು ನಿಲುವಳಿ ಸೂಚನೆಯಾಗಿ ಪರಿವರ್ತನೆ ಮಾಡಿ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ನಾನು ಪದೇ ಪದೇ ಹೇಳುತ್ತಾ ಇದ್ದೇನೆ. ಈಗಾಗಲೇ ನಾನು ರೂಲಿಂಗ್ ಕೊಟ್ಟಿದ್ದೇನೆ. ನಿಲುವಳಿ ಸೂಚನೆ ಇದ್ದರೂ ಸಹ, ಯಾವ ಯಾವುದಕ್ಕೆ ನಿಲುವಳಿ ಸೂಚನೆ ಅಟ್ರಕ್ಟ್ ಆಗುತ್ತದೆ, ಯಾವ ಯಾವುದಕ್ಕೆ ಕೊಡುವುದಕ್ಕೆ ಬರುವುದಿಲ್ಲವೆಂದು ಏನು ರೂಲಿಂಗ್ಸ್ ಇದೆ, ಅವುಗಳನ್ನೆಲ್ಲಾ ಗಮನಿಸಿಯೇ ರೂಲಿಂಗ್ ಕೊಟ್ಟಿದ್ದೇನೆ. ಆದ್ದರಿಂದ, ದಯಮಾಡಿ ಸದನದ ಕಾರ್ಯಕಲಾಪಗಳು ನಡೆಯುವುದಕ್ಕೆ ಅವಕಾಶ ಮಾಡಿ ಕೊಡಬೇಕೆಂದು ಮತ್ತೊಮ್ಮೆ ಎಲ್ಲರಲ್ಲಿ ಮನವಿ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೇ, ಈ ನಿಲುವಳಿ ಸೂಚನೆ ಬಗ್ಗೆ ಈಗಾಗಲೇ ತಾವು ನಿರ್ಣಯ ಕೊಟ್ಟಿದ್ದೀರಿ. ಇಲ್ಲಿ ಮುಖ್ಯವಾದಂಥಾದ್ದು ವಿಷಯದ ಚರ್ಚೆ. ಪ್ರಾಮುಖ್ಯತೆ ಬೇಕೆನ್ನುವ ಮಾತನ್ನು ಅವರು ಹೇಳುತ್ತಾ ಇದ್ದಾರೆ. ತಾವೇನು ಹೇಳಿದ್ದೀರಿ, ನಿಯಮ 69ಕ್ಕೆ ಕನ್‌ವರ್ಟ್ ಮಾಡಿ, ತಕ್ಷಣವೇ ಚರ್ಚೆಯನ್ನು ಪ್ರಾರಂಭ ಮಾಡಿ ಎಂದು ಹೇಳಿದ್ದೀರಿ. ಮತ್ತೊಂದು ವೇಳೆಯನ್ನು, ಮಧ್ಯಾಹ್ನ ಮೂರು ಗಂಟೆಗೋ ಅಥವಾ ನಾಳೆಗೋ ಎನ್ನುವಂಥ ವೇಳೆಯನ್ನು ನಿಗದಿ ಮಾಡಲಿಲ್ಲ. ತಕ್ಷಣವೇ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಕೊಟ್ಟಿದ್ದೀರಿ. ಇದು ಮಹತ್ವದ ವಿಷಯವೆಂದು ತಿಳಿದು, ಅವಕಾಶವನ್ನು ಕೊಟ್ಟಿದ್ದೀರಿ. ಅವರಿಗೆ, ನಿಜವಾಗಿಯೂ ಕಳಕಳಿ ಇದ್ದರೆ, ಆ ವಿಷಯಗಳನ್ನು ಹೇಳಬೇಕಾಗಿದ್ದರೆ, ಇವತ್ತು ಚರ್ಚೆಯನ್ನು ಪ್ರಾರಂಭ ಮಾಡಬಹುದಾಗಿತ್ತು. ಸರ್ಕಾರ ಉತ್ತರ ಕೊಡಲಿಕ್ಕೆ ತಯಾರಾಗಿದೆ. ಆದರೆ, ಏಕೋ ಚರ್ಚೆ ಮಾಡುವುದಕ್ಕೆ ಅವರು ಬಯಸುತ್ತಾ ಇಲ್ಲವೆಂದು ನನಗನ್ನಿಸುತ್ತದೆ. ಈ ನಿಲುವಳಿ ಸೂಚನೆ ಬಗ್ಗೆ ತಾವು ರೂಲಿಂಗ್ ಕೊಟ್ಟ ಮೇಲೂ, ನಿಮ್ಮ ರೂಲಿಂಗ್ ವಿರುದ್ಧ ಇವತ್ತು ಪ್ರತಿಭಟನೆ ಮಾಡುವುವಂಥಾದ್ದು ಬಹುಶಃ ವಿಧಾನ ಮಂಡಲದ ಇತಿಹಾಸದಲ್ಲಿಯೇ ಮೊದಲು ಎಂದು ತಾವು ತಿಳಿದುಕೊಂಡಿದ್ದೇವೆ. ನಾವೂ ಕೂಡ ಪ್ರತಿಪಕ್ಷದ ನಾಯಕರಾಗಿ ಕೆಲಸ ಮಾಡಿದ್ದೇವೆ. ಮತ್ತು ಪ್ರತಿಪಕ್ಷದಲ್ಲಿ ಕುಳಿತು ಕೆಲಸ ಮಾಡಿದ್ದೇವೆ. ಆದರೆ, ಯಾವುದೇ ಸಂದರ್ಭದಲ್ಲೂ ಸಹಿತ ಮಾನ್ಯ ಸಭಾಧ್ಯಕ್ಷರ ಪೀಠಕ್ಕೆ ಗೌರವವನ್ನು ಕೊಟ್ಟು, ನೀವು ಏನೇನು ನಿರ್ಣಯವನ್ನು ಕೊಟ್ಟಿದ್ದೀರಿ, ಅದಕ್ಕೆ ಬದ್ಧರಾಗಿ ಕೆಲಸವನ್ನು ಮಾಡಿದ್ದೇವೆಯೇ ಹೊರತು, ಆ ನಿರ್ಣಯದ ವಿರುದ್ಧ ನಾವು ಯಾವಾಗಲೂ ಪ್ರತಿಭಟನೆಯನ್ನು ಮಾಡಿರಲಿಲ್ಲ. ಆದರೆ, ಪ್ರಥಮ ಬಾರಿ ಇವತ್ತು ತಮ್ಮ ನಿರ್ಣಯದ ವಿರುದ್ಧ ಸದನದಲ್ಲಿ ಏನು ಧರಣಿ ಸತ್ಯಾಗ್ರಹ ಮಾಡುತ್ತಿದ್ದಾರೆ, ಬಹುಶಃ ನನಗನಿಸುತ್ತದೆ ಇದು ಕಪ್ಪುಚುಕ್ಕೆ ಎನ್ನುವಂಥಾದ್ದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

4.10 P.M

ಹೀಗಾಗಿ ಅವರಿಗೆ ನಿಜವಾಗಿಯೂ ಚರ್ಚೆ ಮಾಡಬೇಕೆಂಬ ಆಸಕ್ತಿ ಇದ್ದರೆ ಮಾಡಲಿ. ಇವತ್ತು ಪದವೀಧರ ಕ್ಷೇತ್ರದ ಮತ್ತು ಶಿಕ್ಷಕರ ಕ್ಷೇತ್ರದ ಚುನಾವಣಾ ಫಲಿತಾಂಶ ಬಂದಿದೆ. ಇವತ್ತು ಜನರು ಈ ಚುನಾವಣೆಯಲ್ಲಿ ಕಾಂಗ್ರೆಸ್‌ನವರ ಮೇಲೆ ಯಾವ ರೀತಿಯ ನಿರ್ಣಯ ಕೊಟ್ಟಿದ್ದಾರೆ, ಅದನ್ನಾದರೂ ಅರ್ಥ ಮಾಡಿಕೊಳ್ಳಿ. ಹೀಗಾಗಿ, ಸನ್ಮಾನ್ಯ ಅಧ್ಯಕ್ಷರೇ, ತಾವು ಈಗಾಗಲೇ ರೂಲಿಂಗ್ ಕೊಟ್ಟಿದ್ದೀರಿ, ದಯವಿಟ್ಟು ಅವರು ಚರ್ಚೆಯನ್ನು ಪ್ರಾರಂಭ ಮಾಡಲಿ. ಅವರ ಚರ್ಚೆಗೆ ನಾವು ಉತ್ತರ ಕೊಡಲಿಕ್ಕೆ ತಯಾರಿದ್ದೇವೆ. ಬಹುಶಃ ಅವರಿಗೆ ಚರ್ಚೆ ಮಾಡಲಿಕ್ಕೆ ವಿಷಯ ಇಲ್ಲವೆಂದು ನನಗನ್ನಿಸುತ್ತದೆ. ಇಲ್ಲಿ ಧರಣಿ ಕುಳಿತಿದ್ದಾರೆಂದರೆ, ಚರ್ಚೆ ಮಾಡಲಿಕ್ಕೆ ಅವರಿಗೆ ಯಾವುದೇ ವಿಷಯ ಇಲ್ಲ. ಬೇರೆ ಬೇರೆ ವಿಷಯಗಳು ಇವೆ, ಇಲಾಖೆಗಳ ಮೇಲೆ ಚರ್ಚೆ ಇದೆ, ಬಜೆಟ್ ಮೇಲೆ ಚರ್ಚೆ ಇದೆ. ಆದ್ದರಿಂದ, ದಯವಿಟ್ಟು ಪ್ರಾರಂಭ ಮಾಡಿ.

ಶ್ರೀ ಎಸ್.ಎಸ್. ಪಾಟೀಲ್: ಸಾಮಾನ್ಯ ಜನರ ಮಧ್ಯೆ ಬನ್ನಿ. ನಾವು ರೆಡಿಯಾಗಿದ್ದೇವೆ. ನಿಮಗೆ ಧೈರ್ಯ ಬಂದಿದೆಯಲ್ಲಪ್ಪ.

ಶ್ರೀ ಬಸವರಾಜ ರಾಯರೆಡ್ಡಿ: ದಯವಿಟ್ಟು ಮಾಡಿ.

ಶ್ರೀ ಸಿ. ಚನ್ನಿಗಪ್ಪ: ಮಾನ್ಯ ಅಧ್ಯಕ್ಷರೇ, ವಿಧಾನ ಪರಿಷತ್ತು ಚುನಾವಣೆ ಏನಾಯಿತು ಅಂತ ಹೇಳುತ್ತಿದ್ದಾರೆ. ಅಲ್ಲಿ ಎಷ್ಟರ ಮಟ್ಟಿಗೆ ನಮ್ಮದು ನಿಮ್ಮದು ಆಗಿದೆ ಎನ್ನುವುದನ್ನು ದಯವಿಟ್ಟು ನೀವು ತಿಳಿದುಕೊಳ್ಳಬೇಕು.

ಅಧ್ಯಕ್ಷರು: ಸಭೆಯನ್ನು ಅರ್ಧ ಗಂಟೆ ಕಾಲ ಮುಂದೂಡಲಾಗಿದೆ.

(ಸದನವು 4 ಗಂಟೆ 12 ನಿಮಿಷಕ್ಕೆ ಮುಂದೂಡಲ್ಪಟ್ಟು ಅರ್ಧ ಗಂಟೆ ನಂತರ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸದನವು ಪುನಃ ಸಂಜೆ 05 ಗಂಟೆ 25 ನಿಮಿಷಗಳಿಗೆ ಸಮಾವೇಶಗೊಂಡಿತು)

(ಮಾನ್ಯ ಸಭಾಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು: ಈಗ ಸದನವನ್ನು ನಾಳೆ ಬೆಳಿಗ್ಗೆ 11 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಸಂಜೆ 05 ಗಂಟೆ 26 ನಿಮಿಷಗಳಿಗೆ ಮುಂದೂಡಲ್ಪಟ್ಟು ದಿನಾಂಕ 20ನೇ ಜೂನ್ 2006ರಂದು ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)